ಬೆಂಗಳೂರು ಸಂಪುಟ: 16 ಸಂಚಿಕೆ: 45 ಪುಟ: 06 ಬುಧವಾರ 08-01-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB) Executive Editor: L P Babu Honourary Editor: Venkatesh



ಶಾರುಖ್ ಚಿತ್ರ ಫ್ಲಾಪ್ ಆಗ್ಲಿ

ನಾಟಕದಲ್ಲಿನ ನಟನೆಯಿಂದ 'ಪ್ರೇರಣೆ'

16ರ ಹರೆಯದಲ್ಲಿ ಹಾರ್ಮೋನ್ ಇಂಜೆಕ್ಷನ್!

ಪುಟ 6

## ಮುಖ್ಯಮಂತ್ರಿ, ಗೃಹಸಚಿವರ ಸಮ್ಮುಖದಲ್ಲೇ ಮುಖ್ಯವಾಹಿನಿಗೆ ಬಂದ ಮುಂಡಗಾರು ಲತಾ ತಂಡ

# ಶರಣಾದ ನಕ್ಸಲರು

**ಬೆಂಗಳೂರು:** ನಾಲ್ಕು ರಾಜ್ಯಗಳಿಗೆ ಬೇಕಾಗಿದ್ದ ಹಿಟ್ ಲಿಸ್ಟ್‌ನಲ್ಲಿದ್ದ ಆರು ಮಂದಿ ನಕ್ಸಲರು ಇಂದು ಶರಣಾಗಿದ್ದಾರೆ.

ನಕ್ಸಲ್ ನಾಯಕ ವಿಕ್ರಂಗೌಡ ಹತ್ಯೆಯ ನಂತರ ಸರ್ಕಾರ ಶರಣಾಗಲು ಮುಕ್ತ ಅವಕಾಶ ಕಲ್ಪಿಸಿಕೊಟ್ಟ ಹಿನ್ನೆಲೆಯಲ್ಲಿ ಮೋಸ್ಟ್ ವಾಟೆಂಡ್ ಲೀಸ್ಟ್‌ನಲ್ಲಿದ್ದ ಆರು ಮಂದಿ ಇಂದು ಮುಖ್ಯಮಂತ್ರಿ ಹಾಗೂ ಗೃಹಸಚಿವರ ಸಮ್ಮುಖದಲ್ಲಿ ಬೆಂಗಳೂರು ನಗರದಲ್ಲಿ ಶರಣಾದರು.

ನಕ್ಸಲರ ಶರಣಾಗತಿ ಕಾರ್ಯಕ್ರಮವನ್ನು ಮೊದಲಿಗೆ ಬಾಳೆಹೊನ್ನೂರಿನಲ್ಲಿ ನಿಗದಿಪಡಿಸಲಾಗಿತ್ತು. ಆದರೆ, ಕೊನೆಗಳಿಗೆಯಲ್ಲಿ ಬುಧವಾರ ಬೆಳಿಗ್ಗೆ ಸ್ವತಃ ಮುಖ್ಯಮಂತ್ರಿಯವರೇ ಅಲ್ಲಿನ ಹಿರಿಯ ಅಧಿಕಾರಿಗಳಿಗೆ ಕರೆ ಮಾಡಿ ತಮ್ಮ ಸಮ್ಮುಖದಲ್ಲೇ ಶರಣಾಗತಿ ಮಾಡಿಸುವಂತೆ ಸೂಚನೆ ಕೊಟ್ಟ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಯಿತು,

ಬುಧವಾರ ಬೆಳಿಗ್ಗೆ ಸುಮಾರು 20ಕ್ಕೂ ಹೆಚ್ಚು ವಾಹನಗಳಲ್ಲಿ ಭಾರೀ ಬಿಗಿ ಭದ್ರತೆಯೊಂದಿಗೆ ಬೆಂಗಳೂರು ನಗರಕ್ಕೆ ಕರೆತರಲಾಯಿತು. ಮುಖ್ಯಮಂತ್ರಿ ಸಿದ್ಧರಾಮಯ್ಯ, ಗೃಹ ಸಚಿವ ಜಿ.ಪರಮೇಶ್ವರ್ ಹಾಗೂ ರಾಜ್ಯ ಪೊಲೀಸ್ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಆರು ಮಂದಿ ನಕ್ಸಲರು ಸಮಾಜ್ ಮುಖ್ಯವಾಹಿನಿಗೆ ಸೇರ್ಪಡೆಗೊಂಡರು.

ಮುಂಡುಗಾರು ಲತಾ (ಮುಂಡಗಾರು ಶೃಂಗೇರಿ), ವನಜಾಕ್ಷಿ (ಬಾಳೆಹೊಳೆ ಕಳಸ),



ಸುಂದರಿ (ಕುಂತಲೂರು ದಕ್ಷಿಣ ಕನ್ನಡ), ಮಾರಪ್ಪ ಅರೋಳಿ (ರಾಯಚೂರು), ವಸಂತ ಟಿ (ತಮಿಳುನಾಡು), ಎನ್. ಜೀಶಾ (ಕೇರಳ) ಶರಣಾದ ನಕ್ಸಲರು.


**ಯಾರ ಮೇಲೆ ಏನು ಕೇಸ್?**

ಮುಂಡಗಾರು ಲತಾ ವಿರುದ್ಧ 59 ಪ್ರಕರಣಗಳು ದಾಖಲಾಗಿವೆ. ಸುಂದರಿ ವಿರುದ್ಧ ಉಡುಪಿ, ದ.ಕನ್ನಡದಲ್ಲಿ 3 ಕೇಸ್‌ಗಳು, ಜಯಣ್ಣ ಮೇಲೆ ಉಡುಪಿ, ಮಂಗಳೂರಿನಲ್ಲಿ 3 ಪ್ರಕರಣಗಳಿವೆ, ವನಜಾಕ್ಷಿ ವಿರುದ್ಧ15 ಕೇಸ್ ದಾಖಲಾಗಿವೆ. ಕೆ.ವಸಂತ ಮತ್ತು ಟಿ.ಎನ್. ಜೀಶಾ ವಿರುದ್ಧ ಹಲವು ಕೇಸ್‌ಗಳಿವೆ.

ರಾಜ್ಯ ಸರ್ಕಾರ ನಕ್ಸಲರಿಗೆ ಮೂರು ಕೆಟಗರಿಗಳ ಪ್ಯಾಕೇಜ್ ಅನ್ನು ಘೋಷಿಸಿದ್ದು, ನಕ್ಸಲರು ರಾಜ್ಯದವರೇ ಆಗಿ, ಆಕ್ಟೀವ್ ಆಗಿದ್ದು ಕೇಸ್ ಇದ್ದರೆ ಅಂತಹವರಿಗೆ ಎ ಕೆಟಗರಿ ಅಡಿಯಲ್ಲಿ 7.50 ಲಕ್ಷ ರೂ. ಹಣವನ್ನು ನೀಡಲಾಗುತ್ತದೆ.

ನಕ್ಸಲರು ಹೊರರಾಜ್ಯದವರಾಗಿ, ಶಸ್ತ್ರಸಜ್ಜಿತ ನಕ್ಸಲ್ ಗುಂಪಿನ ಸದಸ್ಯನಾಗಿದ್ದು, ಆತನ ಮೇಲೆ ಒಂದಕ್ಕಿಂತ ಹೆಚ್ಚು ಪ್ರಕರಣ ಇದ್ದರೆ 4 ಲಕ್ಷ ರೂ. ಹಣ ನೀಡಲಾಗುತ್ತದೆ.

ಎಡಪಂಥೀಯ ಭಯೋತ್ಪಾದನಾ ಚಟುವಟಿಕೆ ಬೆಂಬಲಿಸುವ ನಕ್ಸಲರ ಸಂಪರ್ಕ ಹೊಂದಿ, ಪ್ರಕರಣಗಳು ಇದ್ದರೆ ಅಂತಹವರಿಗೆ 2 ಲಕ್ಷ ರೂ. ಹಣವನ್ನು ಸರ್ಕಾರ ನೀಡುತ್ತದೆ. ನಕ್ಸಲರು ಒಟ್ಟು ಮೂರು ಭಾಗಗಳಾಗಿ ಹಣ ಪಡೆಯುತ್ತಾರೆ.




ಕಬ್ಬನ್‌ಪಾರ್ಕ್ ಹೈಗ್ರಂಡ್‌ನ ನೂತನವಾಗಿ ನಿರ್ಮಿಸಿರುವ ಪೊಲೀಸ್ ಠಾಣೆಗಳನ್ನು ಮುಂಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ ಪರಮೇಶ್ವರ್ ಹಾಗೂ ಪೊಲೀಸ್ ಹಿರಿಯ ಅಧಿಕಾರಿಗಳು ಹಾಜರಿದ್ದರು.

## ಬಿಬಿಎಂಪಿ ಅಕ್ರಮ; ಮುಂದುವರೆದ ತನಿಖೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊಳವೆ ಬಾವಿ ಕೊರೆಸುವ ಸಂಬಂಧ 2016ರಿಂದ 2019ರ ಅವಧಿಯಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂ. ಅಕ್ರಮ ಕುರಿತು ತನಿಖೆ ಚುರುಕುಗೊಳಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ.) ಎರಡನೇ ದಿನವೂ ತನಿಖೆ ಮುಂದುವರೆಸಿದೆ.

ನಿನ್ನೆ ಬಿಬಿಎಂಪಿ ಕೇಂದ್ರ ಕಚೇರಿಗೆ ಆಗಮಿಸಿದ್ದ ಇಡಿ ಅಧಿಕಾರಿಗಳು, ಬಿಬಿಎಂಪಿ ಮುಖ್ಯ ಲೆಕ್ಕಾಧಿಕಾರಿ ಬೀನಾ ಅವರನ್ನು ಕರೆಸಿ ಅವರಿಂದ ಯೋಜನೆಗೆ ಸಂಬಂಧಿಸಿದ ಲೆಕ್ಕದ ದಾಖಲೆ ಕೆದಕಿದ್ದರು. ಎರಡನೇ ದಿನವಾದ ಬುಧವಾರ ಬೆಳಗ್ಗೆ 10 ಗಂಟೆ ಸುಮಾರಿಗೆ ಬಿಬಿಎಂಪಿ ಪ್ರಧಾನ ಅಭಿಯಂತರ ಬಿ.ಎಸ್.ಪ್ರಹ್ಲಾದ್ ಅನ್ನು ವಿಚಾರಣೆ ನಡೆಸಿದರು.

ಇಂದು 10 ಗಂಟೆ ನಂತರ ಕಚೇರಿಯಲ್ಲಿ ಹಾಜರಿರುವಂತೆ ಪ್ರಹ್ಲಾದ್ ಗೆ ನಿನ್ನೆಯೇ ಇಡಿ ಅಧಿಕಾರಿಗಳು ತಿಳಿಸಿದ್ದರು.ಅದರಂತೆ ತನಿಖೆ ಪುಟ 2

# ರದ್ದಾಗಿಲ್ಲ, ಮುಂದೂಡಿಕೆ

**ಬೆಂಗಳೂರು:** "ಎಸ್‌ಸಿ-ಎಸ್‌ಟಿ ಶಾಸಕರು, ಸಚಿವರಿಗೆ ಆಯೋಜಿಸಲಾಗಿದ್ದ ಔತಣಕೂಟವನ್ನು ಮುಂದೂಡಿದ್ದೇವಷ್ಟೇ, ರದ್ದು ಮಾಡಿಲ್ಲ" ಎಂದು ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ ನೀಡಿದ್ದಾರೆ.



ಸದಾಶಿವನಗರದ ತಮ್ಮ ನಿವಾಸದ ಬಳಿ ಇಂದು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, "ಚಿತ್ರದುರ್ಗದಲ್ಲಿ ಎಸ್‌ಟಿ/ಎಸ್‌ಟಿ ಸಮಾವೇಶ ಮಾಡುವ ಬಗ್ಗೆ ಚರ್ಚಿಸಲು ಸಭೆ ಕರೆದಿದ್ದೆವು.

ಔತಣಕೂಟದ ಬಗ್ಗೆ ನಾವು ದೆಹಲಿಗೆ ಏನೂ ಹೇಳಿರಲಿಲ್ಲ. ಶಾಸಕರ ಸಭೆ ಅಂದಾಗ ಅವರ ಗಮನಕ್ಕೆ ಹೋಗುತ್ತದೆ. ಹಾಗಾಗಿ, ರಣದೀಪ್ ಸುರ್ಜೇವಾಲ ಕರೆ ಮಾಡಿ ಅವರೂ ಸಹ ಭಾಗವಹಿಸಲು ಉತ್ಸುಕವಾಗಿರುವುದಾಗಿ ತಿಳಿಸಿದರು. ಅವರಿಗೂ ಆಹ್ವಾನ ಕೊಟ್ಟಿದ್ದೇವೆ. ಮುಂದೆ ಸಮಯ ಕೊಡುತ್ತೇನೆ ಎಂದು ಹೇಳಿದ್ದಾರೆ. ಹಾಗಾಗಿ ಔತಣಕೂಟ ಮುಂದೂಡಿದ್ದೇವೆ, ರದ್ದು ಮಾಡಿಲ್ಲ" ಎಂದು ತಿಳಿಸಿದರು.

"ನಮ್ಮ ಔತಣಕೂಟಕ್ಕೆ ಹೈಕಮಾಂಡ್ ವಿರೋಧ ಇಲ್ಲ. ಊಟಕ್ಕೂ ಮೊದಲು ಚರ್ಚೆ ಮಾಡುತ್ತೇವೆ. ಡಿನ್ನರ್ ಅಂದ್ರೆ ಏನೇನೋ ವ್ಯಾಖ್ಯಾನ ಮಾಡುತ್ತೀರಿ. ಸಭೆ ಇದ್ದಾಗ ಊಟ ಮಾಡುವುದು ಸಹಜ. ಸ್ವಲ್ಪ ದಿನ ಕಾಯೋಣ, ಸಭೆ ಅವರಿಗೆ ಇಷ್ಟ ಇತ್ತೋ ಅಥವಾ ಇಲ್ಲವೋ ಎಂಬುದು ಎಲ್ಲವೂ ಗೊತ್ತಾಗುತ್ತದೆ. ನಮ್ಮ ಸಭೆಯನ್ನು ಸಹಿಸುವುದಿಲ್ಲವೆಂದು ಯಾರೂ ಹೇಳಿಲ್ಲ. ಸಭೆಯನ್ನು ಮುಂದೂಡಿದ್ದೇವೆ ಅಷ್ಟೇ. ಸಭೆ ನಡೆಸುತ್ತೇವೆ" ಎಂದರು.

ಹೈಕಮಾಂಡ್‌ಗೆ ಡಿಸಿಎಂ ಡಿ.ಕೆ.ಶಿವಕುಮಾರ್ ದೂರು ನೀಡಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, "ಆ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಈ ಸಭೆಗೆ ಪುಟ 2

## ರಾಜ್ಯದ ವಿವಿಧೆಡೆ ಲೋಕಾ ದಾಳಿ; ದಾಖಲೆಗಳ ಪರಿಶೀಲನೆ

**ಬೆಂಗಳೂರು:** ರಾಜ್ಯದ ವಿವಿಧೆಡೆ ಇಂದು 8 ಮಂದಿ ಸರ್ಕಾರಿ ಅಧಿಕಾರಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಅಸಮತೋಲಿತ ಆಸ್ತಿ ಸಂಗ್ರಹದ ಆರೋಪದಡಿ ಬೆಂಗಳೂರು, ಚಿಕ್ಕಮಗಳೂರು, ಬೀದರ್, ಬೆಳಗಾವಿ, ತುಮಕೂರು, ಗದಗ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಶೋಧ ಕಾರ್ಯ ನಡೆಯುತ್ತಿದೆ. ಬಳ್ಳಾರಿಯ ಬಿಸಿಎಂ ತಾಲೂಕು ಅಧಿಕಾರಿ ಮನೆ ಮೇಲೆ ದಾಳಿ: ಅಕ್ರಮ ಆಸ್ತಿ ಗಳಿಕೆ ಆರೋಪದ ಹಿನ್ನೆಲೆಯಲ್ಲಿ ಬಳ್ಳಾರಿ ತಾಲೂಕು ಬಿಸಿಎಂ ಅಧಿಕಾರಿ ಲೋಕೇಶ್ ನಿವಾಸದ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ. ರಾಮಾಂಜನೇಯ ನಗರದಲ್ಲಿರುವ ನಿವಾಸ, ಸಂಬಂಧಿಕರು ಹಾಗೂ ಸ್ನೇಹಿತರ ನಿವಾಸದ ಮೇಲೂ ಏಕಕಾಲಕ್ಕೆ ದಾಳಿ ಪುಟ 2

## ಜೈಲಿನಲ್ಲಿ ಮೂವರು ಕೈದಿಗಳು ಸಾವು

**ಮೈಸೂರು:** ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಮೂವರು ಕೈದಿಗಳು ಮೃತಪಟ್ಟಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಕೇಕ್ ತಯಾರಿಕೆಗೆ ಬಳಸುವ ಎಸ್ಸೆನ್ಸ್ ದ್ರವ ಕುಡಿದ ಪರಿಣಾಮ ಮೂವರುಖೈದಿಗಳು ಮೃತಪಟ್ಟಿದ್ದಾರೆ.

ವಿವಿಧ ಅಪರಾಧ ಪ್ರಕರಣಗಳಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಮೈಸೂರು ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಮೂವರು ಕೈದಿಗಳು ಮೃತಪಟ್ಟಿದ್ದಾರೆ. ಡಿಸೆಂಬರ್ 26 ರಂದು ಮೈಸೂರು ಕಾರಾಗೃಹದಲ್ಲಿ ಬೇಕರಿ ಪುಟ 2

## ಡಿ.ಕೆ. ಶಿವಕುಮಾರ್ ಸಹನೆ ಕಟ್ಟೆ ಒಡೆಯುವ ಕಾಲ ಸನ್ನಿಹಿತ

**ಬೆಂಗಳೂರು:** ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಅಭದ್ರತೆ. ಒಳ ಬೇಗುದಿ ಇದೆ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸಹನೆಯ ಕಟ್ಟೆ ಯಾವಾಗ ಒಡೆಯುತ್ತದೆ ಎನ್ನುವುದು ಪ್ರಶ್ನೆಯಾಗಿದ್ದು, ಕಾಲ ಸನ್ನಿಹಿತವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಅಭದ್ರತೆ. ಒಳ ಬೇಗುದಿ ಆರಂಭದಿಂದಲೂ ಇದೆ, ಇದು ನಿರೀಕ್ಷಿತ ಬೆಳವಣಿಗೆ ಇದರಲ್ಲಿ ಬಹಳ ಮುಖ್ಯ ವಿಚಾರ ಡಿಕೆಶಿವಕುಮಾರ್ ಅವರ ಸಹನೆ ಅವರು ಪುಟ 2



## ಅಪರಾಧಿಗಳಿಗೆ ಭಯ; ಜನಸಾಮಾನ್ಯರಿಗೆ ಭಯ ಮುಕ್ತ ವಾತಾವರಣ ನಿರ್ಮಿಸಿ

**ಬೆಂಗಳೂರು:** ಅಪರಾಧಿಗಳಿಗೆ ಭಯದ ವಾತಾವರಣ, ಜನ ಸಾಮಾನ್ಯರಿಗೆ ಭಯ ಮುಕ್ತ ವಾತಾವರಣ ನಿರ್ಮಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ಕರೆ ನೀಡಿದರು.

ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಚಾಮರಾಜಪೇಟೆ, ಕಬ್ಬನ್ ಪಾರ್ಕ್ ಮತ್ತು ಹೈಗ್ರೌಂಡ್ಸ್ ಪೊಲೀಸ್ ಠಾಣೆ, ಕಚೇರಿಗಳನ್ನು ಉದ್ಘಾಟಿಸಿದ ಬಳಿಕ ಪುಲಕೇಶಿ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಪೊಲೀಸ್ ವಸತಿ ಸಮುಚ್ಚಯಗಳನ್ನು ಉದ್ಘಾಟಿಸಿ ಮಾತನಾಡಿದರು.

ರಾಜ್ಯದ ಜನಸಂಖ್ಯೆ 7 ಕೋಟಿ ದಾಟಿ ಹೋಗುತ್ತಿದೆ. ಇವರೆಲ್ಲರ ರಕ್ಷಣೆ, ಆಸ್ತಿ ಪಾಸ್ತಿ ಮಾನ ಪ್ರಾಣ ರಕ್ಷಿಸಿ ನೆಮ್ಮದಿಯ ಬದುಕಿಗೆ ಸುರಕ್ಷಿತ ವಾತಾವರಣ ಸೃಷ್ಟಿಸುವ ಜವಾಬ್ದಾರಿ ಪೊಲೀಸ್ ಇಲಾಖೆ ಮೇಲಿದೆ. ಇದಕ್ಕಾಗಿ ಇಲಾಖೆಗೆ ಅಗತ್ಯವಾದ ಸವಲತ್ತು ಮತ್ತು ನೂತನ ಪುಟ 2




## ಸಿಎಂಗೆ ರಾಜ್ಯಪಾಲರ ಪತ್ರ

ಬೆಂಗಳೂರು: ಬೆಳಗಾವಿಯ ಅಧಿವೇಶನದಲ್ಲಿ ಬಿಜೆಪಿಯ ವಿಧಾನಸಭಾ ಸದಸ್ಯ ಸಿ.ಟಿ ರವಿ ಅವರ ದೂರಿನ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ರಾಜ್ಯಪಾಲ ಥಾವರ್‌ಚಂದ್ ಗೆಲ್ಹೋಟ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಸಲಹೆ ಮಾಡಿದ್ದಾರೆ. ಈ ಬಗ್ಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಪತ್ರ ಬರೆದಿದ್ದು, ಬೆಳಗಾವಿಯ ಅಧಿವೇಶನ ಸಂದರ್ಭದಲ್ಲಿ ಪೊಲೀಸರು ನಡೆದುಕೊಂಡ ರೀತಿಯ ಬಗ್ಗೆ ಸಿ.ಟಿ ರವಿ ಅವರು ನನಗೆ ದೂರು ನೀಡಿದ್ದಾರೆ. ಈ ದೂರಿನ ಪ್ರತಿಯನ್ನು ಈ ಪತ್ರದೊಂದಿಗೆ ಲಗ್ಗತ್ತಿಸಿದ್ದೇನೆ. ಚುನಾಯಿತ ಜನಪ್ರತಿನಿಧಿಗಳ ಜತೆ ಪೊಲೀಸರ ವರ್ತನೆಯನ್ನು ಗಂಭೀರವಾಗಿ ಪರಿಗಣಿಸಿ ಪೊಲೀಸ್ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆಯೂ ರಾಜ್ಯಪಾಲರು ಪತ್ರದಲ್ಲಿ ಹೇಳಿದ್ದಾರೆ. ಈ ವಿಚಾರ ಚುನಾಯಿತ ಪ್ರತಿನಿಧಿಗೆ ಸಂಬಂಧಿಸಿದ ವಿಚಾರವಾಗಿದೆ. ಯಾವುದೇ ಚುನಾಯಿತ ಪ್ರತಿನಿಧಿ ದೂರು ನೀಡಿದಾಗ ನಾನು ಮಧ್ಯ ಪ್ರವೇಶಿಸಬೇಕಿದೆ ಸಿ.ಟಿ ರವಿ ಅವರು ಪೊಲೀಸರ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಹಾಗಾಗಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ಸಿಟಿ ರವಿ ಅವರ ಜತೆ ಪೊಲೀಸರು ನಡೆದುಕೊಂಡಿರುವ ವರ್ತನೆ ಸಂಬಂಧ ಅವರು ನೀಡಿರುವ ದಾಖಲಾತಿಯನ್ನು ಈ ಪತ್ರದ ಜತೆ ಕೊಟ್ಟಿದ್ದೇನೆ. ಎಲ್ಲವನ್ನೂ ಪರಿಶೀಲಿಸಿ ಸೂಕ್ತಕ್ರಮವನ್ನು ಕೈಗೊಳ್ಳಿ ಎಂದು ಸಲಹೆ ಮಾಡಿದ್ದಾರೆ.

## ನ್ಯಾಯಾಧೀಶರಿಗೆ ಸಂಬಳ ಮತ್ತು ಪಿಂಚಣಿ ನೀಡಲು ಹಿಂದೇಟು

ನವದೆಹಲಿ: ಚುನಾವಣೆಯಲ್ಲಿ ಉಚಿತ ಯೋಜನೆಗಳಿಗೆ ಹಣವನ್ನು ಹಂಚಿಕೆ ಮಾಡುವ ರಾಜ್ಯಸರ್ಕಾರದ ವಿರುದ್ಧ ಚಾಟಿ ಬೀಸಿರುವ ಸುಪ್ರೀಂಕೋರ್ಟ್ ನ್ಯಾಯಾಧೀಶರಿಗೆ ಸಂಬಳ ಮತ್ತು ಪಿಂಚಣಿ ನೀಡಲು ಹಿಂದೆಮುಂದೆ ನೋಡುತ್ತಿರುವುದೇಕೆ ಎಂದು ಪ್ರಶ್ನಿಸಿದೆ.

ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಗವಾಯಿ ಮತ್ತು ಎಜಿ ಮಸಿಹಾ ಅವರನ್ನೊಳಗೊಂಡ ದ್ವಿಸದಸ್ಯ ಪೀಠ ಅಖಿಲ ಭಾರತ ನ್ಯಾಯಾಧೀಶರ ಸಂಘ ಸಲ್ಲಿಸಿದ್ದ ಮೇಲನವಿ ಅರ್ಜಿಯನ್ನು ವಿಚಾರಣೆ ನಡೆಸುವ ವೇಳೆ ಕೆಲವು ರಾಜ್ಯಸರ್ಕಾರಗಳು ಚುನಾವಣೆಯಲ್ಲಿ ಮತ ಪಡೆಯಲು ಉಚಿತವಾದ ಯೋಜನೆಗಳನ್ನು ಜಾರಿ ಮಾಡುತ್ತಿವೆ ಎಂದು ತರಾಟೆಗೆ ತೆಗೆದುಕೊಂಡಿದ್ದರು.



ದೇಶದಲ್ಲಿ ಅನೇಕ ನ್ಯಾಯಮೂರ್ತಿಗಳಿಗೆ ಅಸಮರ್ಪಕ ವೇತನ ಮತ್ತು ನಿವೃತ್ತಿ ಯೋಜನೆಗಳ ಸರಿಯಾದ ಹಣವನ್ನು ನೀಡುತ್ತಿಲ್ಲ. ಆದರೆ ಚುನಾವಣೆ ಬಂದ ತಕ್ಷಣ ಮತದಾರರಿಗೆ ನಾನಾ ರೀತಿಯ ಯೋಜನೆಗಳನ್ನು ಕೊಡುತ್ತೀರಿ. ನ್ಯಾಯಾಧೀಶರಿಗೆ ಸೌಲಭ್ಯಗಳನ್ನು ಕೊಡಲು ಸರ್ಕಾರದ ಬಳಿ ಹಣ ಇಲ್ಲವೇ ಎಂದು ಪ್ರಶ್ನಿಸಿದರು.

ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಅಲ್ಲಿನ ಆಡಳಿತಾರೂಢ ಮಹಾಯುತಿ ಪುಟ 2

## ನೂತನ ಅಧ್ಯಕ್ಷರಾಗಿ ನಾರಾಯಣನ್ ನೇಮಕ

**ನವದೆಹಲಿ:** ಕೇಂದ್ರ ಸರ್ಕಾರವು ವಿ.ನಾರಾಯಣನ್ ಅವರನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಮತ್ತು ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯಾಗಿ ನೇಮಕ ಮಾಡಿದೆ.

ದೇಶದ ಹಿರಿಯ ಗಗನಯಾತ್ರಿ ಮತ್ತು ಕ್ರಯೋಜೆನಿಕ್ ಎಂಜಿನ್ ತಜ್ಞ



ವಿ.ನಾರಾಯಣನ್ ಅವರು ಜನವರಿ 14 ರಂದು ಪ್ರಸ್ತುತ ಇಸ್ರೋ ಮುಖ್ಯಸ್ಥ ಎಸ್ ಸೋಮನಾಥ್ ಅವರಿಂದ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಎಸ್.ಸೋಮನಾಥ್ ಅವರು ಎರಡು ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸಿದ ನಂತರ ಜನವರಿ 14ರಂದು ನಿವೃತ್ತರಾಗಲಿದ್ದಾರೆ. ವಿ ನಾರಾಯಣನ್ ಅವರ ನೇಮಕವು ಎರಡು ವರ್ಷಗಳ ಅವಧಿಗೆ ಇರುತ್ತದೆ ಎಂದು ಹೇಳಲಾಗಿದೆ. ವಿ ನಾರಾಯಣನ್ ಅವರಿಗೆ ಸುಮಾರು ನಾಲ್ಕು ದಶಕಗಳ ಅನುಭವವಿದೆ. ನಾರಾಯಣನ್ ಪ್ರಸ್ತುತ ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಇಸ್ರೋದ ಎಲ್‌ಪಿಎಸ್‌ಸಿಯ ಪುಟ 2

# ಗ್ರಾಮೀಣ ಭಾಗದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಪೂರೈಸಬೇಕು






**ಚಿಕ್ಕಬಳ್ಳಾಪುರ:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಫಸಲ್ ಭಿಮಾ ಯೋಜನೆಗೆ ಹೆಚ್ಚಿನ ಸಂಖ್ಯೆಯಲ್ಲಿ ರೈತರನ್ನು ನೋಂದಾಯಿಸಲು ಜಿಲ್ಲೆಯಾದ್ಯಂತ ವ್ಯಾಪಕ ಅರಿವು ಮೂಡಿಸಲು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಡಾ.ಕೆ. ಸುಧಾಕರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಕೇಂದ್ರ ಪುರಸ್ಕೃತ ಯೋಜನೆಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರಸ್ತುತ ಫಸಲ್ ಭಿಮಾ ಯೋಜನೆಯಡಿ ಒಟ್ಟು 74,460 ರೈತರು ನೋಂದಾಯಿಸಿಕೊಂಡಿದ್ದಾರೆ. ಜಿಲ್ಲೆಯ ಒಟ್ಟು ರೈತರ ಸಂಖ್ಯೆಗೆ ಹೋಲಿಸಿದರೆ ಫಸಲ್ ಭಿಮಾ ಯೋಜನೆಗೆ ನೋಂದಾಯಿಸಿಕೊಂಡ ರೈತರ ಸಂಖ್ಯೆ ಕಡಿಮೆ ಇದೆ. ಆದ್ದರಿಂದ ಎರಡೂ ಇಲಾಖೆ ಅಧಿಕಾರಿಗಳು ಫಸಲ್ ಭಿಮಾ ನೋಂದಣಿಗೆ ಹೆಚ್ಚಿನ ಗಮನ ಹರಿಸಿ ಈ ಬಗ್ಗೆ ವ್ಯಾಪಕ ಜಾಗೃತಿಯನ್ನೂ ಮೂಡಿಸಬೇಕೆಂದರು. ಕಿಸಾನ್ ಸಮ್ಮಾನ್ ಯೋಜನೆಯಡಿ ಜಿಲ್ಲೆಗೆ 17 ಕಂತುಗಳಲ್ಲಿ ಒಟ್ಟು 361 ಕೋಟಿ ರೂಪಾಯಿ ಹಣ ರೈತರ ಖಾತೆಗೆ ನೇರವಾಗಿ ವರ್ಗಾವಣೆಯಾಗಿದೆ ಎಂದರು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಜಲಜೀವನ್ ಮಿಷನ್ ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಭಾಗದ ಪ್ರತಿ ಮನೆಗೂ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರು ಪೂರೈಸಲು 1640 ಗ್ರಾಮಗಳಿಗೆ ಸರ್ಕಾರ 993 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ ಈ ಯೋಜನೆ ಕೇಂದ್ರ ಸರ್ಕಾರದ ದೂರದೃಷ್ಟಿಯ ಮತ್ತು ಮಹತ್ವದ ಯೋಜನೆಯಾಗಿದೆ. ಆದರೆ, ಜಿಲ್ಲೆಯಲ್ಲಿ ಯೋಜನೆಯ ಕಾಮಗಾರಿ ವೇಗ ತೃಪ್ತಿಕರವಾಗಿಲ್ಲ. ಕಾಮಗಾರಿಯ ವೇಗವನ್ನು ಮತ್ತು ಗುಣಮಟ್ಟವನ್ನು ಹೆಚ್ಚಿಸುವಂತೆ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ನರೇಗಾ ಯೋಜನೆಯಡಿ ಜಿಲ್ಲೆಯಲ್ಲಿ ಮಾನವ ದಿನಗಳನ್ನು 30ಸಾವಿರಕ್ಕಿಂತ ಇನ್ನೂ ಹೆಚ್ಚಿನ ಮಾನವ ದಿನಗಳಿಗೆ ಹೆಚ್ಚಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.

ಕೇಂದ್ರ ಸರ್ಕಾರ ಶಿಕ್ಷಣ, ಆರೋಗ್ಯ ಮುಂತಾದ ಮೂಲಭೂತ ಸೌಕರ್ಯಗಳು ಅಡಿಗೆ ಒತ್ತು ನೀಡುತ್ತಿದೆ. ರೈತರ ಆದಾಯ ದ್ವಿಗುಣಗೊಳ್ಳುವ ನಿಟ್ಟಿನಲ್ಲಿ ಪ್ರಮಾಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಈ ಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು ಹಾಗೂ ಶಾಶ್ವತವಾದಂತಹ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ದೇಶದಲ್ಲೆ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಮಾದರಿಯ ಜಿಲ್ಲೆಯಾಗಿಸಲಾಗುವುದು ಎಂದು ಸಂಸದರು ತಿಳಿಸಿದರು.

ಚಿಕ್ಕಬಳ್ಳಾಪುರ ನಗರದ ವಾರ್ಡ್ ನಂಬರ್ 30ರ ಬಳಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯ ರಸ್ತೆ ಅಗಲೀಕರಣ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಇರುವ ತೊಡಕುಗಳನ್ನು ರೈಲ್ವೆ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮತ್ತು ಜಿಲ್ಲಾಡಳಿತದ ಅಧಿಕಾರಿಗಳ ಸಮ್ಮುಖದಲ್ಲಿ ಇದೇ ತಿಂಗಳ 13 ರಂದು ಸ್ಥಳ ಸಮೀಕ್ಷೆ ನಡೆಸಿ ದಶಕಗಳಿಂದ ಇರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಬಳಿ ಇರುವ ನಂದಿ ಉಪಚಾರ ಹೋಟೆಲ್ ಬಳಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲೂಕಿನ ಗಡಿಯವರೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ 14 ಅಪಘಾತ ವಲಯಗಳನ್ನು ಗುರ್ತಿಸಲಾಗಿದೆ. ಈ ಭಾಗದಲ್ಲಿ ಅಪಘಾತಗಳನ್ನು ತಗ್ಗಿಸಲು ಹಲವು ಯುಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸರ್ವಿಸ್ ರಸ್ತೆ ಅಭಿವೃದ್ಧಿ, ಸೂಚನಾ ಫಲಕಗಳ ನಿರ್ಮಾಣ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ ಎಂದರು.

ಸಭೆಯಲ್ಲಿ ಕೋಲಾರ ಸಂಸದ ಮಲ್ಲೇಶ್ ಬಾಬು, ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಜಿ.ಟಿ. ನಿಟ್ಟಾಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಅಪರ ಜಿಲ್ಲಾಧಿಕಾರಿ ಡಾ. ಎನ್. ಭಾಸ್ಕರ್, ಉಪವಿಭಾಗಾಧಿಕಾರಿ ಅಶ್ವಿನ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಅತಿಕ್ ಪಾಷ, ನಗರ ಸಭೆ ಅಧ್ಯಕ್ಷ ಎ,ಗಜೇಂದ್ರ, ದಿಶಾ ಸಮಿತಿ ಸದಸ್ಯರಾದ ಶಿವಪ್ಪ, ವಿಕಾಸ್, ಎಸ್. ಬಿ ಗಣೇಶ್ ರೆಡ್ಡಿ, ಲಲಿತಮ್ಮ, ಕೆ ನಾಗಭೂಷಣ ರಾವ್, ಮಮತಾ, ಶಿವಕುಮಾರ್, ಬಿ.ವಿ ಕೃಷ್ಣ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

# ಮಲೆ ಮಹದೇಶ್ವರ ಬೆಟ್ಟಕ್ಕೆ ಸಚಿವರ ಭೇಟಿ: ಪರಿಶೀಲನೆ

**ಚಾಮರಾಜನಗರ:** ಪಶು ಸಂಗೋಪನೆ,ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಅವರು ಮಲೆ ಮಹದೇಶ್ವರ ಬೆಟ್ಟಕ್ಕೆ ಇಂದು ಭೇಟಿ ನೀಡಿ ಸಚಿವ ಸಂಪುಟ ಸಭೆ ಸಂಬಂಧ ಸ್ಥಳ ಹಾಗೂ ಪೂರ್ವ ಸಿದ್ದತೆಗಳನ್ನು ಪರಿಶೀಲಿಸಿದರು.

ಮಲೆ ಮಹದೇಶ್ವರ ಬೆಟ್ಟದ ದೀಪದ ಗಿರಿ ಒಡ್ಡುವಿನಲ್ಲಿರು ಮಲೆಮಹದೇಶ್ವರರ ಬೃಹತ್ ಪ್ರತಿಮೆ ಇರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.ಅಧಿಕಾರಿಗಳೊಂದಿಗೆ ಚರ್ಚಿಸಿ ವಿವರ ಪಡೆದರು.

ಬಳಿಕ ಮಲೈಮಹದೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಶಾಸಕರಾದ ಎಂ.ಆರ್.ಮಂಜುನಾಥ್,ಪ್ರಾದೇಶಿಕ ಆಯುಕ್ತರಾದ ಡಿ.ಎಸ್.ರಮೇಶ್,ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಡಿಐಜಿಪಿ ಡಾ.ಬೋರಲಿಂಗಯ್ಯ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿ ರ್ವಾಕಧಿಕಾರಿ ಮೋನಾ ರೋತ್,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತ,ಉಪವಿಭಾಗಧಿಕಾರಿ ಬಿ.ಆರ್. ಮಹೇಶ್,ಮಲೈಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾ ಎ.ಇ.ರಘು ಇನ್ನಿತರರು ಇದ್ದರು.

# ಜಾತಿನಿಂದನೆ ಪ್ರಕರಣ ದಾಖಲು

**ಯಳಂದೂರು:** ತಾಲೂಕಿನ ಅಗರ ಗ್ರಾಮದಲ್ಲಿ ಈಚೆಗೆ ನಾಯಕ ಸಮುದಾಯದ ವಿರುದ್ಧ ಲಿಂಗಾಯಿತ ಸಮುದಾಯದವರು ತಮ್ಮ ಸಭೆಯಲ್ಲಿ ಜಾತಿ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ನಾಯಕ ಸಮುದಾಯದವರು ದೂರು ನೀಡಿದ್ದು, ಈ ಬಗ್ಗೆ ಅಗರ-ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೂರಿನಲ್ಲಿ ನಾಯಕ ಸಮುದಾಯದ ವ್ಯಕ್ತಿಯೊಬ್ಬರಿಗೆ ಬಾಡಿಗೆಗೆ ಮನೆ ಕೊಟ್ಟಿರುವ ವಿಚಾರವಾಗಿ ಲಿಂಗಾಯಿತ ಸಮುದಾಯದ ಕುಟುಂಬವೊಂದಕ್ಕೆ ಸ್ವ-ಜಾತಿಯವರಿಂದಲೇ ಬಹಿಷ್ಕಾರ ಹಾಕಲಾಗಿದೆ ಎಂದು ಪತ್ರಿಕೆಯಲ್ಲಿ ವರದಿ ಪ್ರಕಟಗೊಂಡಿದೆ. ಅಲ್ಲದೆ ಲಿಂಗಾಯಿತರು ತಮ್ಮ ಜನಾಂಗದ ಸಭೆಯಲ್ಲಿ ನಾಯಕರು ಮಾಂಸಹಾರಿಗಳು ಇವರಿಗೆ ಮನೆ, ಅಂಗಡಿ ಮಳಿಗೆಗಳನ್ನು ಬಾಡಿಗೆಗೆ ನೀಡಬಾರದು ಚರ್ಚಿಸಿರುವ ವಿಷಯದ ವಿಡಿಯೋ ತುಣುಕುಗಳು ವ್ಯಾಟ್ಸಪ್ ಹಾಗೂ ಫೇಸ್‌ಬುಕ್ ಗ್ರೂಪ್‌ಗಳಲ್ಲಿ ಹರಿದಾಡಿದೆ. ಈ ವಿಷಯ ವೈರಲ್ ಆಗಿದ್ದು ಇದು ನಾಯಕ ಜನಾಂಗದ ತೇಜೋವಧೆ ಮಾಡುವ ಕೆಲಸವಾಗಿದೆ. ಹಾಗಾಗಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರು ನೀಡಲಾಗಿದೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಈ ಸಂಬಂಧ ಪೊಲೀಸರು ಸಭೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಈ ಸಂಬಂಧ ವಿಚಾರಣೆ ನಡೆಸಿ, ಮುಂದಿನ ಕ್ರಮ ವಹಿಸಿದ್ದಾರೆ.

# ಬಿಳಿಗಿರಿರಂಗನಾಥಸ್ವಾಮಿ ಚಿಕ್ಕ ಜಾತ್ರೆಗೆ ಸಕಲ ಸಿದ್ಧತೆ ಮಾಡಿಕೊಳ್ಳಿ



**ಯಳಂದೂರು:** ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಜ. 15 ರಂದು ನಡೆಯಲಿರುವ ಚಿಕ್ಕಜಾತ್ರೆಗೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಿ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಸಲಹೆ ನೀಡಿದರು.

ಅವರು ಸೋಮವಾರ ರಾತ್ರಿ ತಾಲೂಕಿನ ಬಿಳಿಗಿರಿರಂಗನಬೆಟ್ಟದ ಅತಿಗಣ್ಯರ ವಸತಿಗೃಹದಲ್ಲಿ ನಡೆದ ಸಂಕ್ರಾಂತಿ ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

**ಜ. 15 ರಂದು ಸಂಕ್ರಾಂತಿ ರಥೋತ್ಸವ:** ಸಂಕ್ರಾಂತಿ ಹಬ್ಬದ ಮಾರನೇ ದಿನ ಬೆಟ್ಟದಲ್ಲಿ ಚಿಕ್ಕತೇರು ನಡೆಯುತ್ತದೆ. ಈ ಬಾರಿ ಜ. 15 ರ ಬುಧವಾರ ಮಧ್ಯಾಹ್ನ 11.55 ರಿಂದ 12.06 ರೊಳಗೆ ಸಲ್ಲುವ ಮೀನಾ ಲಗ್ನದಲ್ಲಿ ರಥಾರೋಹಣ ಆರಂಭವಾಗಲಿದೆ. ರಥಾರೋಹಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು ಇಲ್ಲಿ ಭಕ್ತರಿಗೆ ತೊಂದರೆಯಾಗದಂತೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಈ ಬಾರಿ 80 ಬಸ್ಸು:** ಬೆಟ್ಟದ ಜಾತ್ರೆಗೆ ಈ ಬಾರಿ ಕೆಸ್ಸಾರ್ಟಿಸಿ ವತಿಯಿಂದ ಒಟ್ಟು 80 ಬಸ್ಸುಗಳನ್ನು ಓಡಿಸಲಾಗುತ್ತಿದೆ. ಇದರಲ್ಲಿ ಯಳಂದೂರು ಪಟ್ಟಣದಿಂದ 75 ಬಸ್‌ಗಳು ಹಾಗೂ ಚಾಮರಾಜನಗರದಿಂದ 5 ಬಸ್‌ಗಳನ್ನು ಓಡಿಸಲಾಗುವುದು. ಅಲ್ಲದೆ ಜಾತ್ರೆಯ ಅಂಗವಾಗಿ ಕೊಳ್ಳೇಗಾಲ, ಚಾಮರಾಜನಗರ, ಮೈಸೂರು, ಗುಂಡ್ಲುಪೇಟೆಯಿಂದಲೂ ವಿಶೇಷ ಬಸ್‌ಗಳನ್ನು ಓಡಿಸಲಾಗುವುದು. ಇದರೊಂದಿಗೆ ನಾಲ್ಕು ಚಕ್ರದ ವಾಹನಗಳಲ್ಲಿ ಬರುವ ಭಕ್ತರು ಇವರಿಗೆ ನಿಗಧಿಯಾಗಿರು ಸ್ಥಳದಲ್ಲಿ ತಮ್ಮ ವಾಹನವನ್ನು ನಿಲ್ಲಿಸಿ ಇಲ್ಲಿಂದ ದೇಗುಲಕ್ಕೆ ತೆರಳಲು ವಿಶೇಷ ಬಸ್‌ಗಳನ್ನು ಬಿಡಲಾಗುವುದು ಎಂದು ಮಾಹಿತಿ ನೀಡಿದರು.

ಈ ಬಾರಿಯೂ ದ್ವಿಚಕ್ರ, ತ್ರಿಚಕ್ರ, ಗೂಡ್ಸ್ **ವಾಹನ ನಿಷೇಧ:** ಈ ಬಾರಿಯೂ ಬೆಟ್ಟಕ್ಕೆ ತೇರಿನ ದಿನ ವಾಹನದ ದಟ್ಟಣೆಯನ್ನು ತಡೆಗಟ್ಟಲು ದ್ವಿಚಕ್ರ, ತ್ರಿಚಕ್ರ ಹಾಗೂ ಗೂಡ್ಸ್ ವಾಹನಗಳನ್ನು ನಿಷೇಧಿಸಲಾಗಿದೆ. ಇದರಲ್ಲಿ ಬರುವ ಭಕ್ತರು ತಾಲೂಕಿನ ಅರಣ್ಯ ಇಲಾಖೆಯ ಗುಂಬಳ್ಳಿ ಚೆಕ್ ಪೋಸ್ಟ್‌ನ ಬಳಿ ತಮ್ಮ ವಾಹನ ನಿಲ್ಲಿಸಿ ಬಸ್‌ಗಳಲ್ಲೇ ತೆರಳಬೇಕು ಎಂಬ ನಿರ್ಣಯ ಕೈಗೊಳ್ಳಲಾಯಿತು.

ಇಲ್ಲಿ ಪ್ರತಿ ವರ್ಷವೂ ಎರಡು ಬಾರಿ ರಥೋತ್ಸವ ನಡೆಯುತ್ತದೆ. ಇಲ್ಲಿಗೆ ಮೈಸೂರು ಮಹಾರಾಜರೂ ಸೇರಿದಂತೆ ಅನೇಕರು ನೀಡಿರುವ ರತ್ನ ಖಚಿತ ಕಿರೀಟ ಸೇರಿದಂತೆ ಇತರೆ ಚಿನ್ನದ ಒಡವೆಗಳನ್ನು ಹಾಕಲಾಗುತ್ತದೆ. ಇದನ್ನು ಪಟ್ಟಣದ ಉಪ ಖಜಾನೆಯಲ್ಲಿ ಇಡಲಾಗುತ್ತದೆ. ಒಟ್ಟು 6 ಪೆಟ್ಟಿಗೆಗಳಲ್ಲಿ ಚಿನ್ನವನ್ನು ಶೇಖರಿಸಿ ಇಡಲಾಗಿದೆ. ಆದರೆ ಪ್ರತಿ ವರ್ಷವೂ ಕೇವಲ 4 ಪೆಟ್ಟಿಗೆಗಳಲ್ಲಿರುವ ಒಡವೆಗಳನ್ನು ಹಾಕಲಾಗುತ್ತಿದೆ. ಇನ್ನೆರಡು ಪೆಟ್ಟಿಗೆಗಳನ್ನು ತೆರೆಯುತ್ತಿಲ್ಲ. ಇದರ ಬಗ್ಗೆ ಮಾಹಿತಿ ನೀಡಿ, ಇದನ್ನು ತೆಗೆದು ಇಲ್ಲಿರು ಒಡವೆಗಳ ಬಗ್ಗೆ ಮಾಹಿತಿ ನೀಡಿ, ಇದನ್ನು ಕೂಡ ತೆರೆಯಬೇಕು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ರವರಿಗೆ ಸೂಚನೆ ನೀಡಿದರು. ಈ ಬಗ್ಗೆ ಕ್ರಮ ವಹಿಸುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.

ಅಪರ ಜಿಲ್ಲಾಧಿಕಾರಿ ಗೀತಾಹುಡೇದಾ, ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್, ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಉಪಾಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ತಹಶೀಲ್ದಾರ್ ಜಯಪ್ರಕಾಶ್, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಡಿವೈಎಸ್‌ಪಿ ಎಂ. ಧರ್ಮೇಂದ್ರ, ಸಿಪಿಐ ಕೆ. ಶ್ರೀಕಾಂತ್, ಆರ್‌ಎಫ್‌ಒ ನಾಗೇಂದ್ರನಾಯಕ ಬೆಟ್ಟದ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್‌ಕುಮಾರ್, ಪಾರುಪತ್ತೇದಾರ ರಾಜು, ಶೇಷಾದ್ರಿ ಅರ್ಚಕ ರವಿಕುಮಾರ್, ಎಸ್. ನಾಗೇಂದ್ರಭಟ್ ವ್ಯವಸ್ಥಪನಾ ಸಮಿತಿ ಸದಸ್ಯರಾದ ಗುಂಬಳ್ಳಿ ರಾಜಣ್ಣ, ಜೆ. ಶ್ರೀನಿವಾಸ್, ಕೇತಮ್ಮ, ಸ್ಫೂರ್ತಿ, ವೆಂಕಟರಾಮು, ಸಿದ್ದರಾಜು, ಎಂ. ಸುರೇಶ್, ವಿ. ನಾರಾಯಣಸ್ವಾಮಿ ಪಿಎಸ್‌ಐ ಹನುಮಂತ ಉಪ್ಪಾರ್, ವೆಂಕಟೇಶ್, ಗ್ರಾಪಂ ಅಧ್ಯಕ್ಷ ಸಿ.ಡಿ. ಮಹದೇವ, ಸದಸ್ಯರಾದ ಪ್ರತೀಪ್‌ಕುಮಾರ್, ಸಾಕಮ್ಮ ಸೇರಿದಂತೆ ಹಲವರು ಇದ್ದರು.

ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ಅತಿ ಗಣ್ಯರ ವಸತಿ ಗೃಹದಲ್ಲಿ ಸೋಮವಾರ ರಾತ್ರಿ ನಡೆದ ಸಂಕ್ರಾಂತಿ ರಥೋತ್ಸವದ ಪೂರ್ವಭಾವಿ ಸಭೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿದರು.

# ಅಕ್ರಮ ಶೆಡ್ ತೆರವು ಮಾಡಲು ನೋಟಿಸ್ ಜಾರಿ

**ಹನೂರು:** ರಾಜ್ಯ ಹೆದ್ದಾರಿ-38 ಕೊಳ್ಳೇಗಾಲ-ಹಾಸನೂರ್ ಘಾಟ್ ರಸ್ತೆಯ (ಮಸಕ್ಕತ್ತಿಹಳ್ಳ ಪಿ.ಜಿ.ಪಾಳ್ಯದ ಹತ್ತಿರ) ಬದಿಯಲ್ಲಿ ಹೊಸದಾಗಿ ಅಕ್ರಮವಾಗಿ ನಿರ್ಮಿಸಿರುವ ಶೆಡ್ ನ್ನು ತೆರವುಗೊಳಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂ. 8, ಉಪ-ವಿಭಾಗ, ಕೊಳ್ಳೇಗಾಲ ಇವರು ಆದೇಶ ಹೊರಡಿಸಿದ್ದಾರೆ.

ಉಪವಿಭಾಗದ ವ್ಯಾಪ್ತಿಯಲ್ಲಿರುವ ಬರುವ ರಾಜ್ಯ ಹೆದ್ದಾರಿ-38 ಕೊಳ್ಳೇಗಾಲ -ಹಾಸನೂರ್ ಘಾಟ್ ರಸ್ತೆಯ ಸ.38.40ಕಿ.ಮೀ.ನಲ್ಲಿ (ಮಸಕ್ಕತ್ತಿಹಳ್ಳ ಪಿ.ಜಿ.ಪಾಳ್ಯದ ಹತ್ತಿರ) ರಸ್ತೆಯ ಬದಿಯಲ್ಲಿ ಹೊಸದಾಗಿ ಶೆಡ್ ನ್ನು ನಿರ್ಮಿಸಿರುವುದು ಕಂಡು ಬಂದಿದೆ. ಉಲ್ಲೇಖ ಪತ್ರದನ್ವಯ ಲೊಕ್ಕನಹಳ್ಳಿ ರೆವಿನ್ಯೂ ಇಲಾಖೆಯವರೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ ಅಳತೆ ಮಾಡಿ ವರದಿ ನೀಡಲಾಗಿದೆ.

ಚಿಕ್ಕರಂಗಶೆಟ್ಟಿ ದೊಡ್ಡಿಯ ತಾಂಡಶೆಟ್ಟಿ ಬಿನ್ ಚಿಕ್ಕತಾಂಡಶೆಟ್ಟಿ ಎಂಬುವರು ರಸ್ತೆಯ ಬದಿಯಲ್ಲಿ ಹೊಸದಾಗಿ ಶೆಡ್ ನಿರ್ಮಿಸಿರುವುದರಿಂದ ವಾಹನ ಸಂಚಾರಕ್ಕೆ ಅಡತಡೆ ಯುಂಟಾಗಬಹುದು ಹಾಗೂ ಅಪಘಾತಗಳು ಸಹ ಸಂಭವಿಸಬಹುದು. ಇದರಿಂದ ಮುಂದೆ ಸಂಭವಿಸಬಹುದಾದ ಆಗುಹೋಗುಗಳಿಗೆ ತಾವೇ ಜವಾಬ್ದಾರಾಗಿರುತ್ತೀರಿ. ಆದುದರಿಂದ ರಸ್ತೆಯ ಬದಿಯಲ್ಲಿ ಹೊಸದಾಗಿ ನಿರ್ಮಿಸಿರುವ ಶೆಡ್ ನ್ನು 15 ದಿನಗಳೊಳಗೆ ತೆರವುಗೊಳಿಸಬೇಕು ಎಂದು ನೋಟಿಸ್ ಜಾರಿ ಮಾಡಿದ್ದಾರೆ.

ಹನೂರು ತಾಲೂಕಿನ ಪಿ.ಜಿ ಪಾಳ್ಯ ಗ್ರಾಮ ಪಂಚಾಯತ್ ಮೈಸೂರಪ್ಪನ ದೊಡ್ಡಿಯ ಸಾಮಾಜಿಕ ಹೋರಾಟಗಾರರು ಮತ್ತು ಮಾಹಿತಿ ಹಕ್ಕು ಕಾಯ್ದೆ ಬಳಕೆದಾರ ಅಪ್ಪಾಜಿ ಅವರು ಅಕ್ರಮವಾಗಿ ನಿರ್ಮಿಸಿರುವ ಶೆಡ್ ನ್ನು ತೆರವು ಮಾಡುವಂತೆ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ, ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ದೂರು ನೀಡಿದ್ದರು.

ದೂರಿನ ಅನ್ವಯ ಕೊಳ್ಳೇಗಾಲ ಉಪ ವಿಭಾಗ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಸುರೇಂದ್ರ ಅವರು ಸ್ಥಳಕ್ಕೆ ಭೇಟಿ ನೀಡಿ ಅಕ್ರಮವಾಗಿ ತೆರೆದಿರುವ ಹೋಟೆಲ್ ಶೆಡ್ ನಿರ್ಮಾಣವನ್ನು ಪರಿಶೀಲನೆ ನಡೆಸಿ ತೆರವು ಮಾಡಲು ನೋಟಿಸ್ ಜಾರಿ ಮಾಡಿದ್ದು. 15 ದಿನಗಳ ಅವಕಾಶ ನೀಡಲಾಗಿದೆ ತೆರವು ಮಾಡದೆ ಇದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

# ಬಸಪ್ಪನದೊಡ್ಡಿ ಸರ್ಕಾರಿ ಪ್ರಾಥಮಿಕ ಶಾಲೆಗೆ ಡಿ.ಡಿ.ಪಿ.ಐ ಭೇಟಿ

**ಹನೂರು:** ತಾಲೂಕಿನ ಬಸಪ್ಪನದೊಡ್ಡಿ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗೆ ಸೋಮವಾರ ಡಿ.ಡಿ.ಪಿ.ಐ. ರಾಮಚಂದ್ರ ರಾಜೇ ಅರಸ್ ಭೇಟಿ ನೀಡಿ ಮಕ್ಕಳ ಕಲಿಕಾ ಪ್ರಗತಿಯ ಬಗ್ಗೆ ಮಾಹಿತಿ ಪಡೆದರು. ಮಕ್ಕಳ ದಾಖಲಾತಿ, ಶೈಕ್ಷಣಿಕ ಪ್ರಗತಿ ಹಾಗೂ ಶಾಲೆಗೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳ ಮಾಹಿತಿಯನ್ನು ಮುಖ್ಯ ಶಿಕ್ಷಕರಾದ ವೀರಪ್ಪ ಅವರಿಂದ ಮಾಹಿತಿ ಪಡೆದರು. ನಲಿ-ಕಲಿ ಹಾಗೂ ಸ್ಮಾರ್ಟ್ ಕ್ಲಾಸ್ ಕೊಠಡಿಗೆ ತೆರಳಿ ಮಕ್ಕಳ ಪ್ರಗತಿಯನ್ನು ವೀಕ್ಷಿಸಿ. ಶಿಕ್ಷಕರಿಗೆ ಅಗತ್ಯ ಸಲಹೆ ಮತ್ತು ಸೂಚನೆ ನೀಡಿದರು.

ಎನ್.ಎಂ.ಎಂ.ಎಸ್ ಪರೀಕ್ಷೆಗೆ ಬಗ್ಗೆ ಚರ್ಚಿಸಿದ ಅವರು, ಶಾಲಾ ಅವರಣ ವೀಕ್ಷಿಸಿದರು. ಬಳಿಕ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ. ಸಮಿತಿಯೊಂದಿಗೆ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು.

ಇದೇವೇಳೆ ಮಾತನಾಡಿದ ಎಸ್.ಡಿ.ಎಂ.ಸಿ. ಅಧ್ಯಕ್ಷ ಮಲ್ಲೇಶ್ ಅವರು ಶಾಲೆಯಲ್ಲಿ ಆಂಗ್ಲ ಮಾಧ್ಯಮ ತರಗತಿ ಇಲ್ಲದ ಪರಿಣಾಮ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗುತ್ತಿದೆ. ಹಾಗೂ ಬಿಸಿಯೂಟ ಯೋಜನೆಯ ಊಟದ ಕೊಠಡಿ ಇಲ್ಲ. ಈ ಬಗ್ಗೆ ಕ್ರಮವಹಿಸಿ ಎಂದು ಮನವಿ ಮಾಡಿದರು. ಡಿ.ಡಿ.ಪಿ.ಐ.ಅರಸ್ ಪ್ರತಿಕ್ರಿಯಿಸಿ, ಎಸ್.ಡಿ.ಎಂ.ಸಿ.ಹಾಗೂ ಪಿ.ಡಿ.ಒ. ನೇತೃತ್ವದಲ್ಲಿ ಊಟದ ಕೊಠಡಿ ನಿರ್ಮಾಣ ಸಂಬಂಧ ಕ್ರಿಯಾ ಯೋಜನೆ ತಯಾರಿಸಿ ತಾಲೂಕು ಪಂಚಾಯಿತಿಗೆ ಅವರಿಗೆ ಕ್ರಿಯೆ ಯೋಜನೆ ಸಲ್ಲಿಸಿ. ಜತೆಗೆ ಆಂಗ್ಲ ಮಾಧ್ಯಮ ತರಗತಿ ಆರಂಭಿಸುವ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಲ್ಲೇಶ್, ಎಸ್. ಡಿ. ಎಂ. ಸಿ.ಅಧ್ಯಕ್ಷರು. ದೊರೆಸ್ವಾಮಿ, ಶಿಕ್ಷಕರು, ಹಾಗೂ ಹಳೆ ವಿರ್ಧಾಥಿ ಸಂಘದ ಅಧ್ಯಕ್ಷರು, ಆನಂದ್, ಪುಟ್ಟರಾಮು, ಸೋಮಣ್ಣ,ಮಾಲಾ ಹಾಗೂ ಸುಧಾಮಣಿ ಇದ್ದರು.

# ಕೆರೆಕಟ್ಟೆಗಳಿಗೆ ನೀರು ತುಂಬಿಸಿ: ಅಧಿಕಾರಿಗಳಿಗೆ ಸೂಚನೆ




**ಕೆ.ಆರ್.ಪೇಟೆ.:** ಬೇಸಿಗೆ ಸಮೀಪಿಸುತ್ತಿದೆ ಕಾಲುವೆಗಳಲ್ಲಿ ನೀರು ಹರಿಯುತ್ತಿದೆ ಇಂಥಹ ಪರಿಸ್ಥಿತಿಯಲ್ಲಿಯೂ ಕೆರೆಕಟ್ಟೆಗಳಿಗೆ ನೀರು ತುಂಬಿಸದಿದ್ದರೆ ಇಂಜಿನಿಯರ್‌ಗಳಾಗಿ ಏನು ಕೆಲಸ ಮಾಡತ್ತೀರಿ ಎಂದು ಶಾಸಕ ಹೆಚ್.ಟಿ.ಮಂಜು ನೀರಾವರಿ ಇಇ ಆನಂದ್‌ಗೆ ತರಾಟೆ ತೆಗೆದುಕೊಂಡರು.

ಅವರು ಪಟ್ಟಣದ ಹೊರವಲಯದ ಚಿಕ್ಕೋನಹಳ್ಳಿ ಫಾರಂ ಬಳಿ ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇನ್ನೂ ಕೆಲವು ಕಡೆಗಳಲ್ಲಿ ನಾಲೆಗಳಲ್ಲಿ ಸಿಲ್ಟ್ ಮತ್ತು ಜಂಗಲ್ ತೆಗೆದಿಲ್ಲ. ಬ್ರಿಡ್ಜ್ ಕೆಲಸಕ್ಕೆ ರೈಲ್ವೆ ಕಬ್ಬಿಣವನ್ನು ಬಳಕೆ ಮಾಡಿದ್ದಾರೆ ಎಂದು ಸ್ಥಳೀಯರೇ ಚಿತ್ರ ಸಮೇತ ದೂರು ನೀಡಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿ ಇದ್ದು ಕೆಲಸ ನಿರ್ವಹಿಸಲು ಅಸಮರ್ಥರಾದರೆ ಸರ್ಕಾರದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಾದರೂ ಹೇಗೆ ಯುಜಿಡಿ ತ್ಯಾಜ್ಯ ನೀರು ಹೊಸಹೊಳಲು ಕೆರೆಗೆ ಸೇರುತ್ತಿದ್ದು ನಾನು ಸ್ಥಳ ಪರಿಶೀಲನೆ ಮಾಡೋತನಕ ನಿದ್ದೆ ಮಾಡತ್ತಿದ್ರಾ. ನಾಳೆ ಏನಾದರೂ ಅನಾಹುತಗಳುಂಟಾದರೆ ನೀವು ಜವಬ್ದಾರಿ ಆಗ್ತೀರಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆ ಯುಜಿಡಿ ಕೆಲಸ ಸಂಪೂರ್ಣ ಆಗಿದೆ ಎಂದು ಮಾಃಇತಿ ನೀಡಿದ್ದೀರಿ. ಪುರಸಭೆಯ ವಿರುದ್ಧ ಪ್ರಕರಣ ದಾಖಲಿಸುತ್ತೇವೆ. ಅರ್ಧ ಕಾಮಗಾರಿ ಮುಗಿಸಿ ಹಸ್ತಾಂತರ ಮಾಡಿದ್ದೇವೆ. ಬಾಬುಸಾಬ್ ಪ್ರತಾಪ್, ಎಇಇ ಇವರುಗಳ ಕೆಲಸ ಸಮರ್ಪಕವಾಗಿಲ್ಲ. ಮಾಡುವ ಕೆಲಸಗಳ ಬಗ್ಗೆ ನೀಲನಕ್ಷೆ ಹಾಕಿಕೊಂಡು ನಿಗಧಿತ ಸಮಯದಲ್ಲಿ ಕೆಲಸ ಮುಗಿಸಲು ಶ್ರಮಿಸಬೇಕು.

ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳ ವಿರುದ್ಧ ಕಿಡಿ ಕಾರಿದ ಶಾಸಕರು ನಿಮ್ಮ ಮನೆಗೆ ಕೊಳಚೆ ನೀರು ಬಿಟ್ಟರೆ ಸುಮ್ಮನಿರತ್ತೀರಾ.

ಬೋರವೆಲ್ ಪಂಪ್ ರಿಪೇರಿ ಮುಂತಾದ ಕುಡಿಯುವ ನೀರಿನ ಸೌಲಭ್ಯಗಳಿಗೆ ಮೊದಲ ಆದ್ಯತೆಯಾಗಿ ಮಾನವೀಯ ದೃಷ್ಠಿಯಿಂದ ಅವಕಾಶ ಮಾಡಕೊಡಿ.

ಸೋಮನಹಳ್ಳಿ ಗ್ರಾಮದ ಜನವಸತಿ ಪ್ರದೇಶದಲ್ಲಿ ಮದ್ಯದಂಗಡಿ ತೆರವುಗೊಳಿಸುವಂತೆ ಈಗಾಗಲೇ ಸೂಚನೆ ನೀಡಿದ್ದು ಇದುವರೆವಿಗೂ ತೆರವುಗೊಳಿಸಿಲ್ಲ ಪ್ರಭಾವಿಗಳಿಗೆ ಒಂದು ಕಾನೂನು ಜನಸಾಮಾನ್ಯರಿಗೆ ಒಂದು ಕಾನೂನು ಇದೆಯಾ ಎಂದು ಅಬಕಾರಿ ಅಧಿಕಾರಿಗಳಿಗೆ ಬೆವರಿಳಿಸಿದರು.

ಪ್ರಗತಿ ಪರಿಶೀಲನಾ ಸಭೆಗೆ ಮೂರು ಠಾಣೆಯ ಪೊಲೀಸ್ ನಿರೀಕ್ಷಕರು ಬರದರಿಂದ ಶಾಸಕ ಮಂಜು ಗರಂ ಆದರು. ಇತ್ತೀಚಿನ ದಿನಗಳಲ್ಲಿ ಜನತೆ ಪೊಲೀಸರ ಮೇಲೆ ಇಟ್ಟಿರುವ ನಂಬಿಕೆಗಳು ಸುಳ್ಳಾಗುವಂತೆ ವರ್ತಿಸುತ್ತಿದ್ದು ಪೊಲೀಸರು ಸರ್ವಾಧಿಕಾರಿಗಳಾ. ಅವರುಗಳು ತಮ್ಮ ಇಲಾಖೆಯ ಮಾಹಿತಿ ನೀಡಬಾರದು ಎಂದು ಕಾನೂನು ಇದೆಯಾ ಸಭೆಗೆ ಬಂದರೆ ಅವರ ಬಂಡವಾಳ ಬಯಲಾಗುತ್ತದೆಯೆ ಕೂಡಲೇ ಡಿಜಿ ಹಾಗೂ ಐಜಿಗೆ ದೂರು ನೀಡಲು ಸೂಚನೆ ನೀಡಿದರು.

ಪಟ್ಟಣದ ಕ್ರೀಡಾಂಗಣದಲ್ಲಿ ಅಳವಡಿಸಿರುವ ಕ್ರೀಡಾ ಸಾಮಗ್ರಿಗಳ ಬೆಲೆ ಮಾರುಕಟ್ಟೆ ದರಗಳಗಿಂತ ಮೂರುಪಟ್ಟು ಹೆಚ್ಚಾಗಿರುತ್ತದೆ. ತಾಂತ್ರಿಕ ಅನುಮೋದನೆ ಪಡೆಯದೆ ಅಕ್ರಮವಾಗಿ ಬಿಲ್ ಮಾಡಿಕೊಂಡಿರುವುದಾಗಿ ಆರೋಪ. ಮರದ ನೆಲಹಾಸು, ಜಿಮ್ ಸಾಮಾಗ್ರಿ ಖರೀದಿಯಲ್ಲಿ ಅವ್ಯವಹಾರ ಆರೋಪ. ನಿರ್ಮಿತಿ ಕೇಂದ್ರದ ಕಾಮಗಾರಿಗಳನ್ನು ತ್ವರಿತವಾಗಿ ಮುಗಿಸಲು ತಾಕೀತು. ಕಂದಾಯ ಇಲಾಖೆಯ 715 ಸ.ನಂಗಳಲ್ಲಿ 195 ಸ.ನಂಗಳು 1-5 ಆಗಿದ್ದು, ಉಳಿದವು ಆಗಬೇಕು.

50 ಅರ್ಜಿಗಳು ಹೊಸ ಸ.ನಂ ಆಗಿವೆ. ಕಂದಾಯ ಗ್ರಾಮ ದಡದಹಳ್ಳಿಗೆ ಕ್ರಮವಹಿಸಬೇಕು. ತಾಲೂಕು ಕಚೇರಿ ನೌಕರ ಜಯಕುಮಾರ್ ಕಛೇರಿಗೆ ಸಕಾಲದಲ್ಲಿ ಆಗಮಿಸುವುದಿಲ್ಲ ಇವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಿದರು. ಪ್ರತಿ ಗ್ರಾಮಕ್ಕೂ ಮೂರರಿಂದ ನಾಲ್ಕು ಎಕರೆ ಆಶ್ರಯ ಯೋಜನೆಗಾಗಿ ಸರ್ಕಾರಿ ಜಮೀನು ಮೀಸಲಿಡುವಂತೆ ಶಾಸಕ ಮಂಜು ಸೂಚನೆ ನೀಡಿದರು.

ಪ್ರಗತಿಪರಿಶೀಲನಾ ಸಭೆಯಲ್ಲಿ ಉಪವಿಭಾಗಾಧಿಕಾರಿ ಶ್ರೀನಿವಾಸ್, ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ರಾಜಮೂರ್ತಿ, ತಹಶೀಲ್ದಾರ್ ಲೆ.ಕರ್ನಲ್ ಡಾ.ಅಶೋಕ್, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಷ್ಮ, ಗ್ಯಾರಂಟಿ ಸಮಿತಿಯ ಅಧ್ಯಕ್ಷ ಎ.ಬಿ.ಕುಮಾರ್, ಶಾಸಕರ ಆಪ್ತ ಸಹಾಯಕರಾದ ಕುಮಾರಸ್ವಾಮಿ, ಪ್ರತಾಪ್, ದ್ರುವ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಕಾರ್ಮಿಕರು ಈ ದೇಶದ ಆಸ್ತಿ: ಪುಟ್ಟರಂಗಶೆಟ್ಟಿ

**ಚಾಮರಾಜನಗರ:** ಕಾರ್ಮಿಕರು ಈ ದೇಶದ ಆಸ್ತಿಯಾಗಿದ್ದಾರೆ ಎಂದು ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಕಾರ್ಮಿಕ ಇಲಾಖೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಎಲೆಕ್ಟ್ರಿಷಿಯನ್ ವೆಲ್ಡಿಂಗ್ ಮತ್ತು ಮೇಷನ್ ಕಾರ್ಮಿಕರಿಗೆ ಟೂಲ್ ಕಿಟ್ ಹಾಗೂ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಿ ಅವರು ಮಾತನಾಡಿದರು.

ಕಾರ್ಮಿಕರಲ್ಲಿ ಎರಡು ವರ್ಗಗಳಿವೆ. ಒಂದು ಸಂಘಟಿತ ಕಾರ್ಮಿಕರು ಮತ್ತೊಂದು ಅಸಂಘಟಿತ ಕಾರ್ಮಿಕರು. ಸಂಘಟಿತ ಕಾರ್ಮಿಕರಿಗೆ ಸರ್ಕಾರ ಎಲ್ಲ ರೀತಿಯ ಸಾಮಾಜಿಕ ಭದ್ರತೆಗಳನ್ನು ನೀಡುತ್ತಿದೆ. ಅಸಂಘಟಿತ ಕಾರ್ಮಿಕರಿಗೆ ಇಂತಹ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ. ಅವರಿಗೆ ಪ್ರತಿದಿನ ಕೂಲಿಯು ಸಿಗದಂತಹ ಪರಿಸ್ಥಿತಿ ಇದೆ ಹಾಗೂ ಯಾವುದೇ ಸಾಮಾಜಿಕ ಭದ್ರತೆಯೂ ಇಲ್ಲ ಎಂದರು.

ಕಾರ್ಮಿಕ ಇಲಾಖೆಯು ಕಟ್ಟಡ ಮತ್ತು ಇತರೆ ನಿರ್ಮಾಣ ಅಸಂಘಟಿತ ಕಾರ್ಮಿಕರಿಗೆ ನೋಂದಣಿ ಮಾಡಿಸುವ ಜೊತೆಗೆ ಇಲಾಖೆ ವತಿಯಿಂದ ಹಲವಾರು ಸೌಲಭ್ಯಗಳನ್ನು ನೀಡುತ್ತಿದೆ. ಕಾರ್ಮಿಕರು ಇದರ ಉಪಯೋಗ ಪಡೆದುಕೊಂಡು ಅಭಿವೃದ್ಧಿ ಹೊಂದಬೇಕು. ಇತ್ತೀಚಿನ ದಿನಗಳಲ್ಲಿ ಸರ್ಕಾರವು ವಿವಿಧ ವಲಯಗಳನ್ನು ಅಸಂಘಟಿತ ಕಾರ್ಮಿಕರೆಂದು ಗುರುತಿಸಿದ್ದು ನೋಂದಣಿ ಮಾಡಿಸುವ ಕಾರ್ಯ ಆರಂಭವಾಗಿದೆ. ಜಿಲ್ಲೆಯ ಎಲ್ಲಾ ಅಸಂಘಟಿತ ಕಾರ್ಮಿಕರು ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಮಾಡಿಸಿಕೊಳ್ಳುವಂತೆ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಡಾ. ಎಂ. ಸವಿತಾ ಅವರು ಮಾತನಾಡಿ ಕಾರ್ಮಿಕ ಇಲಾಖೆಯು ಕಾರ್ಮಿಕರ ಅಭಿವೃದ್ದಿಗಾಗಿ ಹಲವಾರು ಸೌಲಭ್ಯ ನೀಡುತ್ತಿದೆ. ಕಾರ್ಮಿಕರು ಇಲಾಖೆಯನ್ನು ನೇರವಾಗಿ ಸಂಪರ್ಕಿಸಿ ನೊಂದಣಿ ಮಾಡಿಸಿಕೊಂಡು ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಮಧ್ಯವರ್ತಿಗಳ ಮೊರೆ ಹೋಗಬಾರದು. ಎಲ್ಲ ತಾಲ್ಲೂಕುಗಳಲ್ಲೂ ಕಾರ್ಮಿಕ ನಿರೀಕ್ಷಕರ ಕಚೇರಿ ಇದ್ದು ಕಾರ್ಮಿಕರು ನೇರವಾಗಿ ಇಲಾಖೆಯನ್ನು ಸಂಪರ್ಕಿಸಿ ಸೌಲಭ್ಯ ಪಡೆಯಬಹುದು ಎಂದರು.

ಕಾರ್ಯಕ್ರಮದಲ್ಲಿ ಮೇಷನ್ ಎಲೆಕ್ಟ್ರೀಷಿಯನ್ ವೆಲ್ಡಿಂಗ್ ಕಾರ್ಮಿಕರಿಗೆ ಟೂಲ್ ಕಿಟ್ ಹಾಗೂ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ವತಿಯಿಂದ ಸಿನಿ ಕಾರ್ಮಿಕರು, ಕ್ಷೌರಿಕರು, ಮೋಟಾರ್ ಸಾರಿಗೆ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಯಿತು.

ಹಿರಿಯ ಕಾರ್ಮಿಕ ನಿರೀಕ್ಷಕರಾದ ವಿ.ಎಲ್. ಪ್ರಸಾದ್, ಯೋಜನಾ ನಿರ್ದೇಶಕರಾದ ಮಹೇಶ್, ಕಟ್ಟಡ ಮತು ಇತರೆ ನಿರ್ಮಾಣ ಕಾರ್ಮಿಕ ಮಂಡಳಿಯ ರಾಜೇಶ್, ಅಸಂಘಟಿತ ಕಾರ್ಮಿಕ ಮಂಡಳಿಯ ಶ್ರೀಧರ್, ನಾಗರತ್ನ, ಪ್ರದೀಪ್ ಕುಮಾರ್, ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ಕುವೆಂಪು ಎಲ್ಲಾ ಯುಗಗಳಿಗೂ ಸಲ್ಲುವ ಶ್ರೇಷ್ಠ ಕವಿ



**ಚಾಮರಾಜನಗರ:** ರಾಷ್ಟ್ರಕವಿ ಕುವೆಂಪು ಅವರು ಇಡೀ ಜಗತ್ತಿಗೆ ವಿಶ್ವಮಾನವ ಸಂದೇಶವನ್ನು ನೀಡುವ ಮೂಲಕ ಎಲ್ಲಾ ಯುಗಗಳಿಗೂ ಸಲ್ಲುವ ಶ್ರೇಷ್ಠ ಕವಿಯಾಗಿದ್ದಾರೆ ಎಂದು ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸರಳವಾಗಿ ಹಮ್ಮಿಕೊಳ್ಳಲಾಗಿದ್ದ ಜಗದ ಕವಿ, ಯುಗದ ಕವಿ ಕುವೆಂಪು ಅವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಕನ್ನಡದಲ್ಲಿ ಅನೇಕ ಮೌಲ್ಯಯುತ ಕಥೆ, ಕವನ, ಕಾದಂಬರಿಗಳನ್ನು ರಚಿಸುವ ಮೂಲಕ ಕುವೆಂಪು ಅವರು ಕನ್ನಡ ಭಾಷೆ, ಸಂಸ್ಕೃತಿಗೆ ಅಪಾರವಾದ ಕೊಡುಗೆ ನೀಡಿದ್ದಾರೆ. ಕುವೆಂಪು ಅವರು ಕಥೆ, ಕವನಗಳಿಗೆ ಸೀಮಿತವಾಗಿರದೇ ಹಲವಾರು ವಿಮರ್ಶಾತ್ಮಕ ಹಾಗೂ ವೈಚಾರಿಕತೆಯ ಲೇಖನಗಳನ್ನು ರಚಿಸಿದ್ದಾರೆ. ಅವರು ನೀಡಿದ ವಿಶ್ವಮಾನವ ಸಂದೇಶ ಇಂದಿಗೂ ಪ್ರಸ್ತುತವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ವೆಂಕಟೇಶ್ ಅವರು ಅಭಿಪ್ರಾಯಪಟ್ಟರು.

ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿ. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಮಾತನಾಡಿ ಕನ್ನಡದ ಅತ್ಯಂತ ಶ್ರೇಷ್ಠ ಕವಿಗಳಲ್ಲಿ ಕುವೆಂಪು ಒಬ್ಬರಾಗಿದ್ದಾರೆ. ಕುವೆಂಪು ಅವರ ವಿಶ್ವಮಾನವ ಸಂದೇಶ ಸಾರ್ವಕಾಲಿಕವಾಗಿದೆ. ಕುವೆಂಪು ಅವರ ಅರ್ಥಪೂರ್ಣ ಚಿಂತನೆ, ಆದರ್ಶಗಳನ್ನು ಅನುಸರಿಸಿ ಪಾಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಮಂಜುನಾಥ ಪ್ರಸನ್ನ ಅವರು ಮಾತನಾಡಿ ಕುವೆಂಪು ಅವರು 20ನೇ ಶತಮಾನದ ಕನ್ನಡದ ಬಹುದೊಡ್ಡ ಕವಿಯಾಗಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ, ಕುವೆಂಪು ಅವರು ರಚಿಸದ ಕಥೆ, ಕವನಗಳಿಲ್ಲ ಎಂದರೇ ತಪ್ಪಾಗಲಾರದು. ಕಥೆ, ಕವಿತೆ, ಕಾದಂಬರಿ, ನಾಟಕಕಾರ, ವಿಮರ್ಶಕರು, ಆತ್ಮಕಥನ, ಜೀವನ ಚರಿತ್ರೆ, ವೈಚಾರಿಕ ಲೇಖನಗಳನ್ನು ರಚಿಸಿ ಕನ್ನಡ ಸಾಹಿತ್ಯದಲ್ಲಿ ಕುವೆಂಪು ತಮ್ಮದೇ ಛಾಪು ಮೂಡಿಸಿದ್ದಾರೆ. ಇವೆಲ್ಲವೂ ಈ ದೇಶದ ಸಾಮಾಜಿಕ ಹಿನ್ನೆಲೆಯಲ್ಲಿ ರಚಿತವಾಗಿವೆ ಎಂದು ತಿಳಿಸಿದರು.

ಕನ್ನಡದ ಮೇರುಕೃತಿ ಶ್ರೀ ರಾಮಾಯಣ ದರ್ಶನಂ ರಚಿಸಿದ ಕುವೆಂಪುರವರು 1963ರಲ್ಲಿ ಜ್ಞಾನಪೀಠ ಪುರಸ್ಕೃತರಾದರು. ರಾಮಾಯಣದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗತ ಪಾತ್ರಗಳ ಮೌಲ್ಯವನ್ನು ಅತ್ಯುತ್ತಮವಾಗಿ ಜನರಿಗೆ ಮನವರಿಕೆ ಮಾಡಿದ್ದಾರೆ. ಸ್ತ್ರೀಪರ ಧೋರಣೆಗೆ ಮಹತ್ವ ನೀಡಿದ್ದಾರೆ. ರಾಮಾಯಣದಲ್ಲಿ ತಂದೆ–ತಾಯಿ, ಅಣ್ಣ–ತಮ್ಮ, ಸಹೋದರತ್ವದ ಪ್ರಾಮುಖ್ಯತೆ ತಿಳಿಸಿ ಸಾಮಾನ್ಯದಲ್ಲಿ ಅಸಾಮಾನ್ಯತೆ ಕಂಡವರು ಕುವೆಂಪು. ಓ ನನ್ನ ಚೇತನ, ಆಗು ನೀ ಅನಿಕೇತನ ಕವಿತೆ ರಚಿಸಿ ಕನ್ನಡಕ್ಕೆ ವಿಶ್ವಮಾನ್ಯತೆ ತಂದುಕೊಟ್ಟವರು ಕುವೆಂಪು ಆಗಿದ್ದಾರೆ ಎಂದು ಮಂಜುನಾಥ ಪ್ರಸನ್ನ ಅವರು ಹೇಳಿದರು.

ಕಾರ್ಯಕ್ರಮದ ಆರಂಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಸಂವಿಧಾನ ಪೀಠಿಕೆ ಬೋಧಿಸಿದರು.

ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ಹೀರಾಲಾಲ್, ಬಿಆರ್‌ಟಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸಂತೋಷ್ ಕುಮಾರ್, ಕಾವೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಉದಯಕುಮಾರ್, ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು, ರೈತ ಮುಖಂಡರು ಕಾರ್ಯಕ್ರಮದಲ್ಲಿ ಇದ್ದರು.

# ಬಸ್ ದರ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ




**ಚಾಮರಾಜನಗರ:** ರಾಜ್ಯ ಸರ್ಕಾರ ಕೆಎಸ್‌ಆರ್‌ಟಿಸಿ ಬಸ್ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಜಿಲ್ಲಾ ಬಿಜೆಪಿ ವತಿಯಿಂದ ಚಾಮರಾಜ ನಗರದಲ್ಲಿ ಪ್ರತಿಭಟನೆ ನಡೆಯಿತು. ಚಾಮರಾಜನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ, ರಾಜ್ಯ ಸರ್ಕಾರ ಶೇ.15ರಷ್ಟು ಕೆಎಸ್‌ಆರ್‌ಟಿಸಿ ಬಸ್ ದರ ಏರಿಕೆ ಮಾಡಿದೆ. ಬಸ್‌ನಲ್ಲಿ ಓಡಾಡುವ ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಕೊಡಲಾಗಿದೆ. ಆದರೆ, ಪುರುಷರ ಜೇಬಿನಿಂದ ಶೇ.15 ರಷ್ಟು ಹಣ ವಸೂಲಿ ಮಾಡಲಾಗುತ್ತಿದೆ ಎಂದು ದೂರಿದರು. ಸರ್ಕಾರ ಭ್ರಷ್ಟಚಾರ, ದುರಾಡಳಿತದಲ್ಲಿ ಮುಳುಗಿದೆ. ಇದನ್ನು ಜನರಿಗೆ ತಿಳಿಸಿ ಮುಂದಿನ ದಿನಗಳಲ್ಲಿ ಪಾಠ ಕಲಿಸಿ ಎಂದು ಹೇಳಲು ಧರಣಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯ ದರ್ಶಿ ಮೂಡ್ನಾಕೂಡು ಪ್ರಕಾಶ್, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಮಾಜಿಜಿಲ್ಲಾಧ್ಯಕ್ಷ ಆರ್.ಸುಂದರ್, ನಗರಸಭಾ ಸದಸ್ಯರಾದ ಮನೋಜ್ ಪಟೇಲ್, ಶಿವರಾಜ್, ಮುಖಂಡರಾದ ಬಾಲಸುಬ್ರಹ್ಮಣ್ಯ ಸೇರಿದಂತೆ ಇತರರು ಭಾಗವಹಿಸಿದ್ದರು.

# ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆ

**ಶಿಡ್ಲಘಟ್ಟ:** ತಾಲ್ಲೂಕಿನ ಭಕ್ತರಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಅಶ್ವಿನಿರಾಮಮೂರ್ತಿ ಹಾಗೂ ಉಪಾಧ್ಯಕ್ಷರಾಗಿ ಬಿ.ಆರ್.ಮಂಜುನಾಥ್ ಆವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ನರೇಂದ್ರಕುಮಾರ್ ಘೋಷಿಸಿದ್ದಾರೆ.

ಒಟ್ಟು 10 ಸದಸ್ಯರ ಬಲ ಹೊಂದಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಬಿಸಿಎಂಎ ಮಹಿಳೆ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ಮೀಸಲು ನಿಗದಿಪಡಿಸಲಾಗಿದ್ದು ಚುನಾವಣಾ ಪ್ರಕ್ರಿಯೆ ನಡೆಯಿತು. ಜೆಡಿಎಸ್ ಬೆಂಬಲಿತ ಸದಸ್ಯರು 6, ಕಾಂಗ್ರೆಸ್ ಬೆಂಬಲಿತ ಸದಸ್ಯರು 4 ಸದಸ್ಯರಿದ್ದು, ಜೆಡಿಎಸ್ ಬೆಂಬಲಿತರಾದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ಕೇವಲ ಒಂದೊಂದು ನಾಮಪತ್ರ ಸಲ್ಲಿಕೆಯಾದ ಹಿನ್ನಲೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಚುನಾಯಿತರಾದ ಜೆಡಿಎಸ್ ಬೆಂಬಲಿತ ಸದಸ್ಯರಾದ ಅಶ್ವಿನಿರಾಮಮೂರ್ತಿ ಮತ್ತು ಬಿ.ಆರ್ ಮಂಜುನಾಥ್ ಹಾಗೂ ಸದಸ್ಯರನ್ನು ಶಾಸಕರಾದ ಬಿ.ಎನ್.ರವಿಕುಮಾರ್ ಅವರ ಮೇಲೂರಿನ ನಿವಾಸದಲ್ಲಿ ಸನ್ಮಾನಿಸಿ ಅಭಿನಂದಿಸಿ ಮಾತನಾಡಿದರು. ಪಕ್ಷಾತೀತವಾಗಿ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡುವಂತೆ ಕಿವಿಮಾತು ಹೇಳಿದರು. ಚುನಾವಣಾ ಸಹಾಯಕರಾಗಿ ಪಿಡಿಒ ಅಂಜನ್ ಕುಮಾರ್ ಕಾರ್ಯನಿರ್ವಹಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರಾದ ಸೋಮಶೇಖರ್, ಎನ್.ಮಂಜುನಾಥ್, ಸೌಮ್ಯ ಅಶೋಕ್, ಸ್ವಾತಿ, ಮುಖಂಡರಾದ ತಾದೂರುರಘು, ಎಸ್.ಎನ್.ವೆಂಕಟೇಶ್, ಬಿ.ಎ.ರಮೇಶ್, ಸಿ.ರಾಮಚಂದ್ರಪ್ಪ, ಎಸ್.ನಾರಾಯಣಸ್ವಾಮಿ, ಜಿ.ಬಿ.ಮುನಿರಾಜು, ಆನಂದ್ ಕುಮಾರ್,ಇ. ವಿಜಯ್ ಕುಮಾರ್, ಮುನೇಗೌಡ, ಎಸ್.ವಿ.ವೆಂಕಟೇಶ್, ಎಸ್.ವಿ.ಕೇಶವಪ್ಪ, ಎಸ್ ವಿ. ನಾರಾಯಣಸ್ವಾಮಿ ಮುಂತಾದವರು ಹಾಜರಿದ್ದರು.



# ಬ್ಯಾಟರಿ ಚಾಲಿತ ವೀಲ್ ಚೇರ್ ಸೌಲಭ್ಯಕ್ಕೆ ಅರ್ಜಿ

**ಚಾಮರಾಜನಗರ:**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ಅಂಗವಿಕಲರಿಗೆ ಬ್ಯಾಟರಿ ಚಾಲಿತ ವೀಲ್ ಚೇರ್ ಸೌಲಭ್ಯ ನೀಡಲು ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಸೇವಾ ಸಿಂಧು ಪೋರ್ಟಲ್ ನಲ್ಲಿ URL: https://suvidha.karnataka.gov.in/ ಜನವರಿ 21 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ (ದೂ.ಸಂ 08226–223688) ಹಾಗೂ ಚಾಮರಾಜನಗರ ಎಂ.ಆರ್. ಡಬ್ಲ್ಯೂ ರಾಜೇಶ್ (ಮೊ.ಸಂ 8073716208), ಕೊಳ್ಳೇಗಾಲ ಹಾಗೂ ಹನೂರು ಎಂ.ಆರ್. ಡಬ್ಲ್ಯೂ ಕವಿರತ್ನ (ಮೊ.ಸಂ 7892715408), ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮೀನಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಓಂಶಕ್ತಿ ಭಕ್ತಾದಿಗಳಿಗೆ ಉಚಿತ ಬಸ್ ವ್ಯವಸ್ಥೆ



**ಮುಳಬಾಗಿಲು:** ಹವಮಾನ ವೈಪರೀತ್ಯ ಹೆಚ್ಚಾಗಿದ್ದು, ಓಂ ಶಕ್ತಿ ದೇವಾಲಯಕ್ಕೆ ತೆರಳುತ್ತಿರುವ ಭಕ್ತಾದಿಗಳು ಸಮುದ್ರದ ಕಡೆಗೆ ಹೋಗದೇ, ಮುನ್ನೆಚ್ಚರಿಕಾ ಕ್ರಮ ವಹಿಸಿ ದೇವಿಯ ದರ್ಶನ ಪಡೆದು ಸೌಖ್ಯವಾಗಿ ಹಿಂತಿರುಗಿ ಎಂದು ಜೆಡಿಎಸ್ ಮುಖಂಡ ಎಂ.ಗೊಲ್ಲಹಳ್ಳಿ ಪ್ರಭಾಕರ್ ತಿಳಿಸಿದ್ದಾರೆ.

ಮುಳಬಾಗಿಲು ತಾಲೂಕಿನಿಂದ ಓಂ ಶಕ್ತಿ ದೇವಸ್ಥಾನಕ್ಕೆ ತೆರಳುತ್ತಿರುವ ಭಕ್ತಾಧಿಗಳಿಗೆ ಜೆಡಿಎಸ್ ಮುಖಂಡ ಎಂ.ಗೊಲ್ಲಹಳ್ಳಿ ಪ್ರಭಾಕರ್ ಅವರು ಉಚಿತ ವ್ಯವಸ್ಥೆ ಬಸ್ ವ್ಯವಸ್ಥೆ ಕಲ್ಪಿಸಿದ್ದು, ಅದಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಕ್ತಾದಿಗಳೆಲ್ಲ ಒಟ್ಟಿಗೆ ಹೋಗಿ ದೇವರ ದರ್ಶನ ಪಡೆದು ಕ್ಷೇಮವಾಗಿ ಬರಬೇಕೆಂದು ತಿಳಿಸಿದರು.

ತಾಲೂಕಿನಿಂದ ಓಂ ಶಕ್ತಿ ಭಕ್ತಾದಿಗಳಿಗೆ ಉಚಿತವಾಗಿ ದೇವಸ್ಥಾನಕ್ಕೆ ತೆರುಳಲು ಅನುಕೂಲ ಮಾಡಿ ಕೊಟ್ಟ ತಾಲೂಕಿನ ಜನಪ್ರಿಯ ಶಾಸಕರಾದ ಸಮೃದ್ಧಿ ವಿ.ಮಂಜುನಾಥ್ ರವರು ಮುಷ್ಟೂರು ಪಂಚಾಯಿತಿ ಚಿಕ್ಕನಗವಾರ ಮತ್ತು ಕರಡಿಗಾನಹಳ್ಳಿ ಗ್ರಾಮಗಳ ಓಂ ಶಕ್ತಿ ಬಸ್ಸುಗಳಿಗೆ ನೀಡಿದ ಸಂದರ್ಭದಲ್ಲಿ ಮಾತನಾಡಿದ ಎಂ.ಗೊಲ್ಲಹಳ್ಳಿ ಪ್ರಭಾಕರ್, ಓಂ ಶಕ್ತಿ ಭಕ್ತಾದಿಗಳು ಭಕ್ತಾದಿಗಳು ತಪ್ಪಿ ಹೋದರೆ ಅವರನ್ನು ಹುಡುಕಿ ಮತ್ತೆ ನಿಮ್ಮ ಜೊತೆಯಲ್ಲಿ ಒಟ್ಟಿಗೆ ಕರೆದುಕೊಂಡು ಬರಬೇಕು, ಭಕ್ತಾದಿಗಳು ತಾಯಂದಿರು ದೇವರ ದರ್ಶನ ಪಡೆದು ನಿಮ್ಮ ಕಷ್ಟಗಳನ್ನು ನಿವಾರಿಸಿ ಒಳ್ಳೆಯದು ಮಾಡಲಿ ಎಂದು ದೇವರಲ್ಲಿ ಬೇಡಿ ಆಶೀರ್ವಾದ ಪಡೆದು , ತಾಯಂದಿರಾದ ನಿಮ್ಮ ಆಶೀರ್ವಾದ ನನಗೆ ನೀಡಬೇಕೆಂದು ಎಲ್ಲಾ ಭಕ್ತಾದಿಗಳು ಮತ್ತು ತಾಯಂದಿರಲ್ಲಿ ಮನವಿ ಮಾಡಿದರು.

ತಾಲೂಕಿನ ಎಲ್ಲಾ ತಾಯಂದಿರು ಹೆಣ್ಣು ಮಕ್ಕಳು ಓಂ ಶಕ್ತಿ ದೇವಿ ಆಶೀರ್ವಾದ ಪಡೆದು ನೆಮ್ಮದಿಯಿಂದ ಪ್ರಯಾಣ ಹೋಗಿ ಬರಲೆಂದು ಆಶಾ ಭಾವನೆಯಿಂದ ಉಚಿತ ಬಸ್ಸು ವ್ಯವಸ್ಥೆ ಶಾಸಕರಾದ ಸಮೃದ್ಧಿ ವಿ.ಮಂಜುನಾಥ್ ರವರು ಮಾಡಿದ್ದಾರೆ ಎಂದು ತಿಳಿಸಿದರು, ಮುಂದಿನ ದಿನಗಳಲ್ಲಿ ಚುನಾವಣಾ ಸಂದರ್ಭದಲ್ಲಿ ನಿಮ್ಮೆಲ್ಲರ ಆಶೀರ್ವಾದ ನನಗೆ ನೀಡಿ ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ಮಾಡಲು ಒಂದು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ತಾಲೂಕು ಪಂಚಾಯಿತಿ ಸದಸ್ಯರಾದ ಬ್ಯಾಟನೂರು ಸೀನಪ್ಪ, ಮುಸ್ಟೂರು ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಪೆದ್ದೂರು ವರದಪ್ಪ,ನಗವಾರ ಬಾಬಣ್ಣ , ಉಪ್ಪರಹಳ್ಳಿ ಮಾರ್ಕೊಂಡಪ್ಪ ಹಾಗೂ ಅನೇಕ ಜೆಡಿಎಸ್ ನ ನಾಯಕರು, ಕಾರ್ಯಕರ್ತರು ಹಾಗೂ ಭಕ್ತಾದಿಗಳು ತಾಯಂದಿರು ಭಾಗವಹಿಸಿದ್ದರು.

# 15 ಕುರಿಗಳು ಬೀದಿ ನಾಯಿಗಳಿಗೆ ಬಲಿ

**ಶಿಡ್ಲಘಟ್ಟ:** ಬೀದಿ ನಾಯಿಗಳ ಗುಂಪೊಂದು ಕುರಿ ಶೆಡ್ ಮೇಲೆ ದಾಳಿ ನಡೆಸಿದ್ದು, 15 ಕುರಿಗಳು ಸತ್ತಿರುವ ಘಟನೆ ತಾಲ್ಲೂಕಿನ ಹಂಡಿಗನಾಳದಲ್ಲಿ ನಡೆದಿದೆ.

ಶೆಡ್ಡಿನಲ್ಲಿದ್ದ 21 ಕುರಿಗಳ ಮೇಲೆ ದಾಳಿ ನಡೆಸಿದ್ದು 15 ಕುರಿಗಳು ಸತ್ತಿದ್ದು 5 ಕುರಿಗಳು ಗಂಭೀರವಾಗಿ ಗಾಯಗೊಂಡಿದ್ದು, ಇದರಿಂದ ಕುರಿಗಾಹಿಗಳಿಗೆ ಸುಮಾರು 2 ಲಕ್ಷ ರೂ. ನಷ್ಟವಾಗಿದೆ.

ಮಂಜುನಾಥ್ ಮತ್ತು ಸರಿತಾ ದಂಪತಿಗಳ ಸೇರಿದ್ದ ಕುರಿ ಶೆಡ್‌ನಲ್ಲಿದ್ದ ಕುರಿಗಳ ಮೇಲೆ ಬೀದಿನಾಯಿಗಳ ಹಿಂಡು ದಾಳಿ ನಡೆಸಿದೆ.

ಸ್ಥಳಕ್ಕೆ ತಹಸೀಲ್ದಾರ್ ಬಿ.ಎನ್.ಸ್ವಾಮಿ, ಪಶು ವೈದ್ಯಾಧಿಕಾರಿ ಡಾ.ಶ್ರೀನಾಥ್, ಹಂಡಿಗನಾಳ ಗ್ರಾಮ ಪಂಚಾಯಿತಿ ಪಿಡಿಒ ಮಧು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಈ ಸಂಬಂಧ ತಮ್ಮ ಅಳಲನ್ನು ತೋಡಿಕೊಂಡಿರುವ ಸರಿತಾ,ಈ ಹಿಂದೆ ನಮ್ಮ ಮನೆಯ ದೊಡ್ಡಿಯಲ್ಲಿ ಕಟ್ಟಿಹಾಕಿದ್ದ ಕುರಿಗಳ ಮೇಲೆ ಬೀದಿ ನಾಯಿಗಳ ಗುಂಪು ದಾಳಿ ನಡೆಸಿತ್ತು,ಇದೀಗ ಶೆಡ್‌ನಲ್ಲಿ ಕಟ್ಟಿಹಾಕಿದ ಕುರಿ ಗುಂಪಿನ ಮೇಲೆ ನಾಯಿಗಳು ದಾಳಿ ನಡೆಸಿವೆ ನಮ್ಮೂರಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಿದೆ ಊರಲ್ಲಿ ಒಂದೇ ಒಂದು ಕೋಳಿ ಇಲ್ಲದಂತೆ ಮಾಡಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಹೊಲ ಗದ್ದೆಗಳ ಬಳಿ ಒಬ್ಬಂಟಿಯಾಗಿ ಮಹಿಳೆಯರು, ಮಕ್ಕಳು ಓಡಾಡಲು ಭಯಪಡು ವಂತಾಗಿದೆ ಈ ಬಗ್ಗೆ ಗ್ರಾ.ಪಂ.ಗೆ ಗ್ರಾಮಸ್ಥರು ಹಲವು ಬಾರಿ ಮನವಿ ಮಾಡಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ಹೇಳಿದರು.

# ಜ.12ರಿಂದ ಹಾಲುಮತ ಸಂಸ್ಕೃತಿ ವೈಭವ



**ಕುಕನೂರು:** ತಿಂಥಣಿ ಬ್ರಿಡ್ಜ್‌ನ ಶ್ರೀ ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರು ಪೀಠದಲ್ಲಿ ಜ.12ರಿಂದ ಮೂರು ದಿನಗಳ ಕಾಲ ಹಾಲುಮತ ಸಂಸ್ಕೃತಿ ವೈಭವ ನಡೆಯಲಿದೆ ಸರ್ವರೂ ತನು ಮನ ಧನ ದಾನ್ಯಗಳ ಸೇವೆಯ ಮೂಲಕ ಉತ್ಸವದಲ್ಲಿ ಪಾಲ್ಗೊಳ್ಳಬೇಕು ಎಂದು ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಾಲುಮತ ಉತ್ಸವ 2025ರ ಕುರಿತು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಒಟ್ಟು ಮೂರು ದಿನ ಉತ್ಸವ ನಡೆಯಲಿದೆ. ಜನೆವರಿ 12 ರಂದು ಶಿವ ಸಿದ್ದ ಯೋಗ ವಿದ್ಯಾಮಂದಿರದ ಶಿಲಾನ್ಯಾಸ ಮತ್ತು ಪೂಜಾರಿಗಳ ಸಮಾವೇಶ, ಸಂಜೆ ಟಗರುಗಳ ಕಾಳಗ, 13 ರಂದು ಹಾಲುಮತ ಭಾಷ್ಕರ, ಕನಕರತ್ನ, ಸಿದ್ದಶ್ರೀ ಪ್ರಶಸ್ತಿ ಪ್ರಧಾನ, 14 ರಂದು ಸಿದ್ದರಾಮೇಶ್ವರ ಜಯಂತಿ ಪ್ರಯುಕ್ತ ಸರ್ವ ಸಿದ್ದರ ಸ್ಮರನೊತ್ಸವ, ಸಂಜೆ ಎತ್ತುಗಳ ಭಾರ ಎತ್ತುವ ಸ್ಪರ್ಧೆ ಇರುತ್ತದೆ. ತಾಲೂಕಿನ ಹಾಲುಮತ ಸಮಾಜ ಭಾಂದವರು ಇತರರು ಹೆಚ್ಚಿನ ಸಂಖ್ಯೆಯಲ್ಲಿ ಉತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಕಳಕಪ್ಪ ಕಂಬಳಿ ಕರೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಹಾಲುಮತ ಸಂಘದ ಅಧ್ಯಕ್ಷ ಮಂಜುನಾಥ್ ಕಡೇಮನಿ, ಹನುಮಂತಪ್ಪ ಚೆಂಡೂರು, ಗಗನ್ ನೋಟಗಾರ್, ಮುಖಂಡರಾದ ಸಿದ್ದಯ್ಯ ಕಳ್ಳಿಮಠ, ಶಿವು ಯಲಬುರ್ಗಾ, ಸಂಗಮೇಶ್ ಗುತ್ತಿ, ರಹೇಮಾನ್ ಸಾಬ್ ಮಕ್ಕಪ್ಪ ನವರ್ ಹಾಲುಮತ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.

# ಬಸ್‌ದರವನ್ನು ಇಳಿಕೆ ಮಾಡಲು ಒತ್ತಾಯ



ಮುಳಬಾಗಿಲು: ಶೇ.15%ರಷ್ಟು ಏರಿಕೆ ಮಾಡಿರುವ ಸರ್ಕಾರಿ ಬಸ್‌ದರವನ್ನು ಇಳಿಕೆ ಮಾಡಿ ಸಮರ್ಪಕವಾದ ಗ್ರಾಮೀಣ ಬಸ್ ಸೇವೆ ಒದಗಿಸಿ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಸಾರಿಗೆ ಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ನಗರದ ಬಸ್‌ನಿಲ್ದಾಣದಲ್ಲಿ ಮಾತನಾಡಿದ ಅವರು, ಪಂಚ ಗ್ಯಾರೆಂಟಿಗಳನ್ನು ನೀಡುವ ಮುಖಾಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಜನ ಸಾಮಾನ್ಯರ ಮೇಲೆ ತಮ್ಮ ದರ್ಪವನ್ನು ತೋರುತ್ತಿದ್ದಾರೆ. ಉಚಿತ ಯೋಜನೆಗಳಿಗೆ ಹಣ ಒದಗಿಸಲು ಬಡವರ ಮೇಲೆ ಬೆಲೆ ಏರಿಕೆ ಮಾಡುವ ಮುಖಾಂತರ ತಮ್ಮ ಪೌರುಷವನ್ನು ತೋರಿಸುವ ಬದಲು ಎಲ್ಲಾ ಗ್ಯಾರೆಂಟಿಗಳನ್ನು ಹಿಂಪಡೆದು ವಚನಭ್ರಷ್ಟ ಮಾತುತಪ್ಪಿದ ಸರ್ಕಾರ ಎಂದು ಸಾರ್ವಜನಿಕವಗಿ ಒಪ್ಪಿಕೊಂಡು ರಾಜೀನಾಮೆ ನೀಡಿ ಚುನಾವಣೆಗೆ ಬರಲಿ ಎಂದು ರಾಜ್ಯ ಸರ್ಕಾರಕ್ಕೆ ಸವಾಲು ಹಾಕಿದರು.

ಒಂದು ಕಡೆ ಶಕ್ತಿ ಯೋಜನೆ ಜಾರಿ ಮಾಡಿ ಮಹಿಳೆಯರಿಗೆ ಉಚಿತ ಬಸ್ ಸೇವೆ ಒದಗಿಸಿರುವ ಸರ್ಕಾರ ಎಲ್ಲಾ ಉಚಿತ ಉಚಿತ ಎಂದು ಮಹಿಳೆಯರಿಗೆ ಉಚಿತ ನೀಡಿ, ಬಸ್‌ಟಿಕೇಟ್ ಏರಿಕೆ ಮಾಡಿ ಪುರಷರ ಜೋಬಿಗೆ ಕತ್ತರಿ ಹಾಕುವ ಮೂಲಕ ಸಂಸಾರಗಳಲ್ಲಿ ಒಡಕನ್ನು ಮಾಡುವ ಸರ್ಕಾರಗಳೇ ಕೆಲವೇ ದಿನಗಳಲ್ಲಿ ನಿಮ್ಮ ವಿರುದ್ಧ ಪುರುಷರು ಹೋರಾಟ ಮಾಡುವ ಕಾಲ ದೂರವಿಲ್ಲವೆಂದು ಎಚ್ಚರಿಕೆ ನೀಡಿದರು.

ತಾಲ್ಲೂಕು ಪ್ರಧಾನ ಕಾರ್ಯದರ್ಶಿ ರಾಜೇಶ್ ಮಾತನಾಡಿ ಅತಿವೃಷ್ಟಿ ಅನಾವೃಷ್ಟಿಯಿಂದ ತತ್ತರಿಸಿರುವ ಗ್ರಾಮೀಣ ಪ್ರದೇಶದ ರೈತ ಕೂಲಿ ಕಾರ್ಮಿಕರ ಜೀವನದ ಜೊತೆ ಸರ್ಕಾರ ಹಾಗೂ ಸಾರಿಗೆ ಸಚಿವರು ಚೆಲ್ಲಾಟವಾಡುತ್ತಿದ್ದಾರೆ. ಏಕಾಏಕಿ ದಿಡೀರನೆ 15 ರಷ್ಟು ಟಿಕೇಟ್ ಏರಿಕೆ ಮಾಡಿ ನಷ್ಟದಲ್ಲಿರುವ ಸಾರಿಗೆ ಸಂಸ್ಥೆಗಳನ್ನು ಉದ್ದಾರ ಮಾಡುತ್ತೇವೆಂದು ಹೇಳುವ ವಚನ ಭ್ರಷ್ಟ ಸಚಿವರೇ ನಿಮಗೆ ಮಾನ ಮರ್ಯಾದೆ ಇದಿಯೇ ಎಂದು ಪ್ರಶ್ನೆ ಮಾಡುವ ಜೊತೆಗೆ ಟಿಕೇಟ್ ಏರಿಕೆ ಮಾಡಿ ಜನರ ತೆರಿಗೆ ಹಣವನ್ನು ಲೂಟಿ ಮಾಡುವ ಭ್ರಷ್ಟಸರ್ಕಾರ ಎಂದು ಆಕ್ರೊಷ ವ್ಯಕ್ತಪಡಿಸಿದರು.

ಒಂದು ಕಡೆ ಟಿಕೇಟ್ ದರ ಏರಿಕೆ ಮಾಡಿ ಮತ್ತೊಂದು ಕಡೆ ಗ್ರಾಮೀಣ ರಸ್ತೆಗಳು ಸರಿಇಲ್ಲ ಎಂದು ಸಮರ್ಪಕವಾಗಿ ಬಸ್ ಸೇವೆ ಇಲ್ಲದೆ, ಗ್ರಾಮೀಣ ಪ್ರದೇಶದ ರೈತರು ವಿದ್ಯಾರ್ಥಿಗಳು ಕೂಲಿ ಕಾರ್ಮಿಕರು ನಗರಕ್ಕೆ ಬರಬೇಕಾದರೆ ಆಟೋ ಇಲ್ಲವೆ ಖಾಸಗಿ ಬಸ್‌ಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇದ್ದರೂ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದು ಆರೋಪ ಮಾಡಿದರು.

ಆರ್.ಟಿ.ಓ ಅಧಿಕಾರಿಗಳ ಆದೇಶದಂತೆ 10 ಲಕ್ಷ ಕಿಲೋಮೀಟರ್ ಓಡಿರುವ ಬಸ್ಸುಗಳನ್ನು ಗುಜರಿಗೆ ಹಾಕಬೇಕು ಅವುಗಳನ್ನು ಉಪಯೋಗಿಸುವಂತಿಲ್ಲ ಎಂದು ಆದೇಶವಿದ್ದರೂ ಅದನ್ನು ಸರಿಪಡಿಸದೆ ಎಲ್ಲಾ ಡಿಪೋಗಳಲ್ಲಿ 10 ರಿಂದ 15 ಲಕ್ಷ ಓಡಿರುವ ಬಸ್ಸುಗಳನ್ನು ಗ್ರಾಮೀಣ ಸೇವೆಗೆ ಬಿಟ್ಟು ಚಾಲಕರು ಹಾಗೂ ಗ್ರಾಮೀಣ ಪ್ರದೇಶದ ಕೂಲಿಕಾರ್ಮಿಕರ ಜೀವನದ ಜೊತೆ ಚೆಲ್ಲಾಟ ವಾಡುವ ಜೊತೆಗೆ ಸರ್ಕಾರಿ ಬಸ್ಸು ನಿಲ್ದಾಣಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ.

ಸಿ.ಸಿ.ಕ್ಯಾಮರ ಇಲ್ಲ. ಒಟ್ಟಾರೆಯಾಗಿ ಅಭಿವೃದ್ಧಿ ಕಾಣದ ನಿಲ್ದಾಣಗಳಾಗಿ ಮಾರ್ಪಟ್ಟಿವೆ ಎಂದು ಅಸಮದಾನ ವ್ಯಕ್ತಪಡಿಸುವ ಜೊತೆಗೆ ಕೂಡಲೇ ಏರಿಕೆ ಮಾಡಿರುವ ಬಸ್ ಧರವನ್ನು ಇಳಿಕೆ ಮಾಡಿ ಸಮರ್ಪಕವಾದ ಗ್ರಾಮೀಣ ಸೇವೆ ಒದಗಿಸದೇ ಹೋದರೆ ರೈತ ಸಂಘದಿಂದ ಎಲ್ಲಾ ಬಸ್‌ಡಿಪೋಗಳ ಮುಂದೆ ಜಾನುವಾರುಗಳ ಸಮೇತ ಹೋರಾಟ ಮಾಡುವ ಎಚ್ಚರಿಕೆಯನ್ನು ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಮುಖಂಡ ಬಂಗಾರಿ ಮಂಜು, ಸುನಿಲ್‌ಕುಮಾರ್, ಭಾಸ್ಕರ್, ಪಾರುಕ್‌ಪಾಷ, ಮುಂತಾದವರು ಇದ್ದರು.

# ಜಿಲ್ಲಾ ಪದಾಧಿಕಾರಿಗಳ ಆಯ್ಕೆ

**ಚಿಕ್ಕಬಳ್ಳಾಪುರ:** ಇಂಟರ್ನ್ಯಾಷನಲ್ ಹ್ಯೂಮನ್ ರೈಟ್ಸ್ ಆರ್ಗನೈಜೇಷನ್ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳ ಆಯ್ಕೆ ಮಾಡಲಾಗಿದ್ದು ಇಂದು ನಗರದ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸೌತ್ ಇಂಡಿಯಾ ಪ್ರಧಾನ ಕಾರ್ಯದರ್ಶಿ ವಿಶ್ವನಾಥ ರಾವ್ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಿಸಿದರು.

ನಂತರ ಮಾತನಾಡಿದ ಅವರು ನಮ್ಮ ಸಂಸ್ಥೆ ಮಾನವ ಹಕ್ಕುಗಳ ಉಲ್ಲಂಘನೆ ಕುರಿತು ಹೆಚ್ಚಿನ ನಿಗಾ ವಹಿಸಿದೆ ಹಾಗೆ ಭ್ರಷ್ಟಾಚಾರದ ನಿರ್ಮೂಲನೆಗೆ ಹೆಚ್ಚು ಒತ್ತು ನೀಡಿದ್ದು ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಸಂಸ್ಥೆ ಸರ್ಕಾರದ ಜತೆ ಕೈಜೋಡಿಸಿ ಕಾರ್ಯನಿರ್ವಹಿಸುತ್ತಿದ್ದು ರಾಜ್ಯ ಮಟ್ಟದಲ್ಲಿ ತಮ್ಮ ಚಟುವಟಿಕೆಗಳನ್ನು ಸಕ್ರೀಯ ಗಳಿಸಲು ಕರ್ನಾಟಕದಲ್ಲಿ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಸಿದೆ.

ರಾಷ್ಟ್ರದಲ್ಲಿ ಸಂಭವಿಸಿದ ಹಲವಾರು ಪ್ರಕರಣಗಳನ್ನು ವಿರೋಧಿಸಿ ಖಂಡಿಸಿದೆ, ತಪ್ಪಿತಸ್ಥರ ವಿರುದ್ಧ ಕಾನೂನು ಹೋರಾಟ ನಡೆಸುವ ನಿಟ್ಟಿನಲ್ಲಿ ಕೂಡ ಸಂಸ್ಥೆ ಮುಂದಾಗಿದೆ ಎಂದರು.

ಐ.ಹೆಚ್.ಆರ್.ಓ ನೂತನ ರಾಜ್ಯ ಅಧ್ಯಕ್ಷ ವೇಣುಗೋಪಾಲ್ ರಾವ್ ಮಾತನಾಡಿ, ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಯನ್ನು ವಿರೋಧ ಸರ್ಕಾರದ ಜತೆ ಕೈಜೋಡಿಸಿ ಹೋರಾಟ ಮಾಡುವುದೆ ಸಂಸ್ಥೆಯ ಮೂಲ ಉದ್ದೇಶ, ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಫೌಂಡೇಶನ್ ಕಾರ್ಯನಿರ್ವಹಿಸುತ್ತಿದ್ದು ಇಂದು ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳ ಆಯ್ಕೆ ಮಾಡಲಾಗಿದ್ದು ಸಂಸ್ಥೆಯ ಪದಾಧಿಕಾರಿಗಳು ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಭ್ರಷ್ಟಾಚಾರ ನಿರ್ಮೂಲನೆಗೆ ಹೆಚ್ಚು ಒತ್ತು ನೀಡಲಿದ್ದಿವೆ ಎಂದರು.

ಐ.ಹೆಚ್.ಆರ್.ಓ ನೂತನ ಜಿಲ್ಲಾಧ್ಯಕ್ಷ ಡಾ.ದಿಲೀಪ್ ಕುಮಾರ್ ಮಾತನಾಡಿ ನೂತನ ಪದಾಧಿಕಾರಿಗಳ ತಂಡ ಮಾನವ ಹಕ್ಕುಗಳ ಉಲ್ಲಂಘನೆ ಕುರಿತು ಹೆಚ್ಚಿನ ನಿಗಾ ವಹಿಸುವ ಜೊತೆಗೆ ಜನಸಾಮಾನ್ಯರಲ್ಲಿ ಹಕ್ಕುಗಳ ಉಲ್ಲಂಘನೆ ಬಗ್ಗೆ ಅರಿವು ಮೂಡಿಸಲು ಸಕ್ರಿಯವಾಗಿ ಕಾರ್ಯ ನಿರ್ವಹಿಸಲಿದೆ,ಇದಲ್ಲದೇ ವ್ಯಾಪಕವಾಗಿ ನಡೆಯುತ್ತಿರುವ ಭ್ರಷ್ಟಾಚಾರ ತಡೆಗೆ ಒಬ್ಬಿಬ್ಬರಿಂದ ಸಾಧ್ಯವಿಲ್ಲ,ಭ್ರಷ್ಟಾಚಾರದ ಬಗ್ಗೆ ಮಾಹಿತಿ ಬಂದಲ್ಲಿ ನಮ್ಮ ಸಂಸ್ಥೆ ಸರ್ಕಾರದ ಗಮನಕ್ಕೆ ತಂದು ಅವರ ಜತೆ ಕೈ ಜೋಡಿಸಿ ಹೋರಾಟ ಮಾಡಲಾಗುವುದು ಎಂದರು.

ನೂತನ ರಾಜ್ಯ ಪ್ರಧಾನ ಕಾರ್ಯದರ್ಶಿ ಮುನಿರಾಜು,ಜಿಲ್ಲಾ ಉಪಾಧ್ಯಕ್ಷ ಅಭಿಷೇಕ ಗುಪ್ತಾ, ಪ್ರಧಾನ ಕಾರ್ಯದರ್ಶಿ ಸನತ್ ಮತ್ತು ಇತರರು ಉಪಸ್ಥಿತರಿದ್ದರು.

# ಮಹಿಳಾಧಿಕಾರಿಗಳ ಮಧ್ಯೆ ಫೈಟ್

ಮುಳಬಾಗಿಲು: ಮುಳಬಾಗಿಲು ತಾಲೂಕಿನ ಅರಣ್ಯ ಅಧಿಕಾರಿ ಹುದ್ದೆಗಾಗಿ ಇಬ್ಬರು ಮಹಿಳಾ ಅಧಿಕಾರಿಗಳ ಮಧ್ಯೆ ಫೈಟ್‌ಗೆ ಜಿಲ್ಲಾಧಿಕಾರಿ, ಬ್ರೇಕ್ ಹಾಕಿದ್ದಾರೆ.

ವರ್ಗಾವಣೆ ಆಗಿದ್ದರು, ಹಿಂದಿನ ಆರ್‌ಎಫ್‌ಓ ಜ್ಯೋತಿ, ವಲಯ ಅರಣ್ಯ ಅಧಿಕಾರಿ ಕಚೇರಿಯ ಎರಡು ಕೊಠಡಿಗಳಿಗೆ ಬೀಗವನ್ನು ಜಡಿದು, ಕಳೆದ ಮೂರು ದಿನಗಳಿಂದ ನಾಟ್ ರೀಚಬಲ್ ಆಗಿದ್ದರು, ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಟೀಕೆಗಳು ಕೇಳಿಬಂದಿದ್ದು, ವರ್ಗಾವಣೆಯಾಗಿದ್ದರೂ, ನೂತನ ಖಈಔ ಶಾಲಿನಿ ಅವರಿಗೆ ಚಾರ್ಜ್ ನೀಡದೆ ಸತಾಯಿಸಿದ್ದರು.

ಮೇಲಾಧಿಕಾರಿಗಳ ವಿರುದ್ಧ ವಾಗ್ದಾಳಿ ನಡೆಸಿದ ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್ ಅರಣ್ಯ ಅಧಿಕಾರಿಗಳ ನಡೆಯನ್ನು ಟೀಕಿಸಿದ್ದರು.

ಕೂಡಲೇ ಕಚೇರಿ ಬೀಗವನ್ನು ಹೊಡೆದು ಹಾಕಿ ಸಾರ್ವಜನಿಕ ಕೆಲಸವನ್ನು ಮುಂದುವರಿಸುವಂತೆ ಜಿಲ್ಲಾಧಿಕಾರಿ ಸೂಚನೆ ನೀಡಿದ ನಂತರ, ಮುಳಬಾಗಿಲು ಅರಣ್ಯಾಧಿಕಾರಿ ಕಚೇರಿ ಬೀಗವನ್ನು, ೦ಅಈ ಅಧಿಕಾರಿ ನೇತೃತ್ವದಲ್ಲಿ ಒಡೆದು ಹಾಕಿ, ನೂತನ ಆರ್‌ಎಫ್‌ಓ ಶಾಲಿನಿ ಅವರಿಗೆ ಅಧಿಕಾರವನ್ನು ಹಿರಿಯ ಅಧಿಕಾರಿಗಳು ಹಸ್ತಾಂತರ ಮಾಡಿದರು.

ಇದೇ ವೇಳೆ ಮಾತನಾಡಿದ ನೂತನ ಆರ್‌ಎಫ್‌ಓ ಶಾಲಿನಿ ಅವರು ಮುಳಬಾಗಿಲು ತಾಲೂಕಿನಲ್ಲಿ ಅರಣ್ಯ ಸಂರಕ್ಷಣೆ ನಮ್ಮ ಮೊದಲ ಗುರಿಯಾಗಿದ್ದು, ಹುದ್ದೆಗಾಗಿ ಇದ್ದ ಎಲ್ಲಾ ತೊಡಕುಗಳು ನಿವಾರಣೆಯಾಗಿವೆ ಎಂದರು. ಕೋಲಾರ ಜಿಲ್ಲಾಧಿಕಾರಿ ಎಂ.ಆರ್. ರವಿ ಅವರು ಏಕಾಏಕಿ ಕಚೇರಿಯ ಕೊಠಡಿಗೆ ಬೀಗ ಹಾಕಿದ ಕ್ರಮ ಖಂಡನೀಯ, ಈ ಬಗ್ಗೆ ಪೊಲೀಸ್ ಕೇಸ್ ನೀಡುವಂತೆ ಅರಣ್ಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ.

# ಕಲ್ಲಿದ್ದಲು ಗಣಿಯಲ್ಲಿ ಸಿಲುಕಿದ 9 ಜನರಲ್ಲಿ ಓರ್ವ ಕಾರ್ಮಿಕನ ಮೃತದೇಹ ಹೊರಕ್ಕೆ

**ದಿಮಾ ಹಸವೊ:** ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯ ಉಮ್ರಾಂಗ್ಸೊದಲ್ಲಿನ ಕಲ್ಲಿದ್ದಲು ಗಣಿಯೊಳಗೆ ಸಿಲುಕಿರುವ 9 ಕಾರ್ಮಿಕರ ಪೈಕಿ ಒಬ್ಬ ಕಾರ್ಮಿಕನ ಮೃತದೇಹವನ್ನು ಮೇಲೆತ್ತಲಾಗಿದೆ. ಕಳೆದ ಮೂರು ದಿನಗಳಿಂದ ನಡೆಯುತ್ತಿರುವ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆ ಮತ್ತು ಎನ್‌ಡಿಆರ್‌ಎಫ್ ಡೈವರ್ಸ್ ಭಾಗಿಯಾಗಿದ್ದಾರೆ.

ಗಣಿಯಲ್ಲಿ ಸಿಲುಕಿರುವ ಉಳಿದ 8 ಮಂದಿ ಬದುಕುಳಿದಿರುವ ಸಾಧ್ಯತೆ ಕಡಿಮೆ ಎನ್ನಲಾಗಿದ್ದು ಭೂ ಸೇನೆ, ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಣಾ ಕಾರ್ಯ ಚುರುಕುಗೊಳಿಸಿದ್ದಾರೆ ಎಂದು ಎನ್‌ಡಿಆರ್‌ಎಫ್ ಅಧಿಕಾರಿಗಳು ಹೇಳಿದ್ದಾರೆ.

ಕಳೆದೆರಡು ದಿನಗಳಿಂದ ಸಾಗುತ್ತಿದ್ದ ಕಾರ್ಯಾಚರಣೆಗೆ ಮಂಗಳವಾರ ಸಂಜೆ ಕೊಂಚ ವಿರಾಮ ನೀಡಲಾಗಿತ್ತು. ಬುಧವಾರ ಬೆಳಗ್ಗೆಯಿಂದ ಹಗಲು ರಾತ್ರಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಇದೀಗ ರಕ್ಷಣಾ ತಂಡವನ್ನು ಕೂಡಾ ವಿಸ್ತರಿಸಲಾಗಿದೆ ಎಂದು ಎನ್‌ಡಿಆರ್‌ಎಫ್ ಉಪ ಕಮಾಂಡೆಂಟ್ ಎನ್.ತಿವಾರಿ ಮಾಹಿತಿ ನೀಡಿದರು.

ಮಂಗಳವಾರ ಸಂಜೆ ಬಿಡುವು ನೀಡಲಾಗಿದ್ದ ಕಾರ್ಯಾಚರಣೆ ಬುಧವಾರ ಬೆಳಗ್ಗೆ ಪುನಾರಂಭಗೊಂಡಿದ್ದು, ಸಂಕಷ್ಟದಲ್ಲಿ



ಸಿಲುಕಿರುವ ಕಾರ್ಮಿಕರನ್ನು ನಮ್ಮ ತಂಡ ಶೀಘ್ರದಲ್ಲೇ ತಲುಪಲಿದ್ದು, ರಕ್ಷಿಸುವ ಭರವಸೆ ಇದೆ. ಸದ್ಯ ಎನ್‌ಡಿಆರ್‌ಎಫ್ ಮತ್ತು ಸೇನೆ ಒಟ್ಟಿಗೆ ಗಣಿಯಲ್ಲಿ ಕೆಲಸ ಮಾಡುತ್ತಿದ್ದು, ಅವರೊಂದಿಗೆ ಶೀಘ್ರದಲ್ಲೇ ನೌಕಾ ಸಿಬ್ಬಂದಿಗಳೂ ಸೇರಲಿದ್ದಾರೆ ಎಂದು ಅವರು ಹೇಳಿದರು.

ಗಣಿ ಕಾರ್ಮಿಕರೊಬ್ಬರು ಮಾತನಾಡಿ, ನಾವು ಗಣಿಯಲ್ಲಿ ಕೆಲಸ ಮಾಡುತ್ತಿದ್ದಾಗ ಜನರು ನೀರು ತುಂಬುತ್ತಿದೆ ಎಂದು ಕೂಗಲು ಆರಂಭಿಸಿದರು. ಆಗ 30ರಿಂದ 35 ಜನ ನಾವು ಹೊರಬಂದೆವು. ಆದರೆ 15-16 ಜನರು ಅಲ್ಲೇ ಸಿಲುಕಿಕೊಂಡರು ಎಂದು ತಿಳಿಸಿದರು.

ರಕ್ಷಣಾ ಕಾರ್ಯದ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅಸ್ಸಾಂ ಸಿಎಂ ಹಿಮಾಂತ್ ಬಿಸ್ವಾ ಶರ್ಮಾ, ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಿಸಲಾಗಿದೆ. ಒಬ್ಬರನ್ನು ಬಂಧಿಸಲಾಗಿದೆ. ಇದೊಂದು ಅನಧಿಕೃತ ಗಣಿಗಾರಿಕೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ರಕ್ಷಣಾ ಕಾರ್ಯಾಚರಣೆಯ ಕುರಿತು ಕೇಂದ್ರ ಕಲ್ಲಿದ್ದಲು ಸಚಿವ ಜಿ.ಕೃಷ್ಣ ರೆಡ್ಡಿ ಅವರ ಜೊತೆಗೂ ಚರ್ಚಿಸಲಾಗಿದ್ದು, ಸಹಾಯ ಯಾಚಿಸಲಾಗಿದೆ. ಅವರೂ ಕೂಡ ಕಾರ್ಯಾಚರಣೆಯಲ್ಲಿ ಅಸ್ಸಾಂ ಸರ್ಕಾರವನ್ನು ಬೆಂಬಲಿಸಲು ಎಲ್ಲಾ ರೀತಿಯ ನೆರವು ನೀಡುವಂತೆ ನಿರ್ದೇಶಿಸಿದ್ದಾರೆ. ಸಚಿವರ ತ್ವರಿತ ಪ್ರತಿಕ್ರಿಯೆ ಮತ್ತು ಬೆಂಬಲಕ್ಕೆ ಧನ್ಯವಾದಗಳು ಎಂದು ತಿಳಿಸಿದ್ದಾರೆ.

# ಯುಕೆ ಪ್ರಧಾನಿ ವಿರುದ್ಧ ಭಾರತೀಯರ ಆಕ್ರೋಶ

ಯುಕೆ ಪ್ರಧಾನಿ ಏಷ್ಯನ್ ಗ್ರೂಮಿಂಗ್ ಗ್ಯಾಂಗ್ ಎಂಬ ಪದವನ್ನು ಬಳಕೆ ಮಾಡಿದ್ದು, ಇದಕ್ಕೆ ಭಾರತೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇಂಗ್ಲೆಂಡ್‌ನಲ್ಲಿ ನಡೆದ ಮಕ್ಕಳ ಲೈಂಗಿಕ ದೌರ್ಜನ್ಯ ಹಗರಣಕ್ಕೆ ಸಂಬಂಧಿಸಿದಂತೆ ಮಾತನಾಡುವಾಗ, ಯುಕೆ ಪ್ರಧಾನಿ ಕೀರ್ ಸ್ಟಾರ್ಮರ್ , ಏಷ್ಯನ್ ಗ್ರೂಮಿಂಗ್ ಗ್ಯಾಂಗ್ ಎಂದು ಉಲ್ಲೇಖಿಸಿದ್ದರು. ದುಷ್ಕರ್ಮಿಗಳು ಹೆಚ್ಚಾಗಿ ಪಾಕಿಸ್ತಾನಿ ಮೂಲದವರಾಗಿದ್ದರೂ, ಎಲಾನ್ ಮಸ್ಕ್‌ನ ಟೀಕೆಗೆ ವಿರುದ್ಧವಾಗಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಸ್ಟಾರ್ಮರ್ ಏಷ್ಯನ್ ಗ್ರೂಮಿಂಗ್ ಗ್ಯಾಂಗ್ ಎಂಬ ಪದವನ್ನು ಬಳಸಿದ್ದು, ಆಕ್ರೋಶಕ್ಕೆ ಕಾರಣವಾಗಿದೆ.

ಯುಕೆ ಹಿಂದೂ ಕೌನ್ಸಿಲ್ ಅಧ್ಯಕ್ಷ ಕೃಷ್ಣಾ ಭಾನ್ ಮಾತನಾಡಿ, ನಮ್ಮ ಹಿಂದೂ, ಸಿಖ್ ಹುಡುಗಿಯರು ಬಲಿಪಶುಗಳಾಗುತ್ತಿದ್ದಾರೆ, ಏಷ್ಯನ್ ಎಂದರೆ ವಿಯೆಟ್ನಾಮೀಸ್, ಶ್ರೀಲಂಕಾ,ಜಪಾನೀಸ್, ಭಾರತೀಯರು ಇತ್ಯಾದಿ ಬರುತ್ತಾರೆ, ಅವರು ನಮ್ಮನ್ನು ಈ ಗ್ಯಾಂಗ್‌ನ ಭಾಗವಾಗಿ ಏಕೆ ವರ್ಗೀಕರಿಸಬೇಕು ಎಂದು ಪ್ರಶ್ನಿಸಿದರು.

ಗ್ರೂಮಿಂಗ್ ಗ್ಯಾಂಗ್ ಎಂದರೇನು ಇದು ಸ್ತ್ರೀಯರನ್ನು ಶೋಷಿಸುವಂಥ ಗ್ಯಾಂಗ್. ಬ್ರಿಟನ್ನಿನ ಹೆಣ್ಣುಮಕ್ಕಳೇ ಇವರ ಟಾರ್ಗೆಟ್. ಇಂಗ್ಲೆಂಡ್‌ನಲ್ಲಿ ನೆಲೆ ನಿಂತಿರುವ ಶ್ರೀಮಂತರ ಮಕ್ಕಳೇ ಗ್ರೂಮಿಂಗ್ ಗ್ಯಾಂಗ್‌ನ ಖೆಡ್ಡಾಕ್ಕೆ ಬೀಳುತ್ತಿದ್ದಾರೆ. ಈ ಗ್ಯಾಂಗ್‌ನ ಸದಸ್ಯರು ಬ್ರಿಟಿಷ್ ಹೆಣ್ಮಕ್ಕಳನ್ನು ದೈಹಿಕವಾಗಿ, ಮಾನಸಿಕವಾಗಿ ಮತ್ತು ಲೈಂಗಿಕವಾಗಿ ಬಳಸಿಕೊಂಡ ಸಹಸ್ರಾರು ಪ್ರಕರಣಗಳು ದಾಖಲಾಗಿವೆ. ಗ್ರೂಮಿಂಗ್ ಗ್ಯಾಂಗ್‌ಗಳ ಬಲೆಗೆ ಸಿಕ್ಕಿಬಿದ್ದವರ ಪೈಕಿ ಅಪ್ರಾಪ್ತರ ಸಂಖ್ಯೆ ಹೆಚ್ಚು.

ಬ್ರಿಟಿಷ್ ಹೆಣ್ಣುಮಕ್ಕಳನ್ನು ಬಲೆಗೆ ಬೀಳಿಸಿ ಹಣ ಸುಲಿಗೆ ಮಾಡುವುದೇ ಈ ಗ್ಯಾಂಗ್‌ನ ಮುಖ್ಯ ಗುರಿ. ಇದಕ್ಕಾಗಿ ವಿಡಿಯೊ ಬ್ಲಾಕ್‌ಮೇಲ್ ತಂತ್ರವನ್ನು ಇವರು ಅನುಸರಿಸುತ್ತಿದ್ದಾರೆ. ಕೆಲವು ತರುಣಿಯರು ಸಾಮೂಹಿಕ ಅತ್ಯಾಚಾರಕ್ಕೂ ತುತ್ತಾಗಿದ್ದಾರೆ ಎಂದು ಬಿಬಿಸಿ ವರದಿಗಳು ಹೇಳಿವೆ. ಈ ಎಲ್ಲ ಪ್ರಕರಣಗಳಲ್ಲೂ ಬ್ರಿಟಿಷರ ಆಸ್ತಿ,



ಸಂಪತ್ತನ್ನು ದೋಚುವುದೇ ಪ್ರಧಾನ ದುರುದ್ದೇಶವಾಗಿರುವುದು ಬೆಳಕಿಗೆ ಬಂದಿದೆ.

ಶಾಲೆಯಲ್ಲಿ ಕಲಿಕೆಯಲ್ಲಿ ಹಿಂದುಳಿದ, ಸಿಂಗಲ್ ಚೈಲ್ಡ್ ಆಗಿ ಒಬ್ಬಂಟಿಯಾಗಿರುವ, ಖಿನ್ನತೆಯಂಥ ಮಾನಸಿಕ ಸಮಸ್ಯೆ ಎದುರಿಸುತ್ತಿರುವ ಹೆಣ್ಮಕ್ಕಳಿಗೆ ಬ್ರಿಟಿಷ್ ಪಾಕಿಸ್ತಾನಿ ಹುಡುಗರು ನೆರವಾಗುವ ನಾಟಕವಾಡುತ್ತಾರೆ. ಆರಂಭದಲ್ಲಿ ಉಡುಗೊರೆಗಳನ್ನು ನೀಡಿ ರಂಜಿಸುತ್ತಾರೆ. ಕ್ರಮೇಣ ಈ ಸಲುಗೆ ಪ್ರೀತಿಗೆ ತಿರುಗುತ್ತದೆ. ಪಾರ್ಟಿಗಳಿಗೆ ಕರೆದೊಯ್ದು, ಮದ್ಯ ಮತ್ತು ಡ್ರಗ್ಸ್ ವ್ಯಸನಕ್ಕೆ ತಳ್ಳುತ್ತಾರೆ. ಹುಡುಗಿಯರು ಅವರನ್ನು ನಂಬುತ್ತಿದ್ದಂತೆಯೇ ಲೈಂಗಿಕವಾಗಿ ಬಳಸಿಕೊಳ್ಳುತ್ತಾರೆ.

ಲಂಡನ್‌ನಿಂದ ಸುಮಾರು 163 ಮೈಲುಗಳಷ್ಟು ದೂರದಲ್ಲಿರುವ ಈ ಪಟ್ಟಣದಲ್ಲಿ ಬ್ರಿಟನ್‌ನ ಸಣ್ಣ ಪಟ್ಟಣವಾದ ರೋದರ್‌ಹ್ಯಾಮ್‌ನಲ್ಲಿ 20 ವರ್ಷ ಹಳೆಯ ಹಗರಣವೊಂದು ಮತ್ತೊಮ್ಮೆ ಸುದ್ದಿಯಾಗಿದೆ. ಈ ಬಲಿಪಶುಗಳ ಸಂಖ್ಯೆ ಸುಮಾರು 14 ನೂರು ಎಂದು ಹೇಳಲಾಗುತ್ತದೆ. ಅವರಲ್ಲಿ ಹೆಚ್ಚಿನವರು ಅಪ್ರಾಪ್ತರಾಗಿದ್ದರು.

ಈ ಪ್ರವೃತ್ತಿಯು ಹಲವು ವರ್ಷಗಳ ಕಾಲ ಮುಂದುವರೆಯಿತು ಮತ್ತು 2010 ರಲ್ಲಿ, ಪಾಕಿಸ್ತಾನಿ ಮೂಲದ ಐದು ಜನರನ್ನು ಶಿಕ್ಷಿಸಿದಾಗ, ಈ ಮಾದರಿಯು ಬಹಿರಂಗವಾಯಿತು. 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರ ಮೇಲೆ ದೈಹಿಕ ಶೋಷಣೆ, ಕಳ್ಳಸಾಗಣೆ ಮತ್ತು ಅಮಾನವೀಯ ಹಿಂಸೆಯ ಆರೋಪ ಹೊರಿಸಲಾಗಿತ್ತು. ರೋದರ್‌ಹ್ಯಾಮ್‌ನಲ್ಲಿ ಮಾತ್ರವಲ್ಲದೆ ಬ್ರಿಟನ್‌ನ 50ಕ್ಕೂ ಹೆಚ್ಚು ನಗರಗಳಲ್ಲಿ ಬ್ರಿಸ್ಟಲ್ ಮತ್ತು ಆಕ್ಸ್‌ಫರ್ಡ್‌ನಲ್ಲಿ ಇಂತಹ ಘಟನೆಗಳು ಬೆಳಕಿಗೆ ಬರುತ್ತಲೇ ಇವೆ.

2014 ರಲ್ಲಿ, ಕಾರ್ಯಕರ್ತ ಪ್ರೊಫೆಸರ್ ಅಲೆಕ್ಸ್ ಜೆ ಈ ವಿಷಯವನ್ನು ತನಿಖೆ ಮಾಡಿದಾಗ, ಅವರು ಲೈಂಗಿಕ ದೌರ್ಜನ್ಯ ಮತ್ತು ಹುಡುಗಿಯರ ವಿರುದ್ಧ ಅಪರಾಧಗಳನ್ನು ಎಸಗುವವರನ್ನು ಗ್ರೂಮಿಂಗ್ ಗ್ಯಾಂಗ್ ಎಂದು ಹೆಸರಿಸಿದರು.

ಈ ಗ್ರೂಮಿಂಗ್ ಗ್ಯಾಂಗ್‌ಗಳು ಬ್ರಿಟಿಷ್ ರಾಜಕೀಯದಲ್ಲಿ ಕೋಲಾಹಲಕ್ಕೆ ಕಾರಣವಾಗಿವೆ. ಈ ವೇಳೆ ಎಲೋನ್ ಮಸ್ಕ್ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಎಕ್ಸ್‌ನಲ್ಲಿ, ಮಸ್ಕ್ ಅವರು ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ಕೀರ್ ಸ್ಟಾರ್ಮರ್ ಅವರು 2008 ರಿಂದ 2013 ರವರೆಗೆ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದರು ಎಂದು ಮಸ್ಕ್ ಹೇಳಿಕೊಂಡಿದ್ದಾರೆ, ಆದರೆ ಗ್ರೂಮಿಂಗ್ ಗ್ಯಾಂಗ್‌ಗಳಲ್ಲಿ ಭಾಗಿಯಾಗಿರುವ ಜನರನ್ನು ನ್ಯಾಯಾಲಯಕ್ಕೆ ತರಲು ಇನ್ನೂ ವಿಫಲರಾಗಿದ್ದಾರೆ.

2014 ರಲ್ಲಿ ಅಲೆಕ್ಸ್ ಜೆ ವರದಿಯಲ್ಲಿ ಏನಿತ್ತು? 2014 ರಲ್ಲಿ ಕಾರ್ಯಕರ್ತ ಪ್ರೊಫೆಸರ್ ಅಲೆಕ್ಸ್ ಜೆ ಅವರ ತನಿಖಾ ವರದಿಯು 1997 ರಿಂದ ಹುಡುಗಿಯರು ಬಲಿಪಶುಗಳಾಗುತ್ತಿದೆ ಎಂದು ಬಹಿರಂಗಪಡಿಸಿದೆ ಮತ್ತು 2013 ರ ವೇಳೆಗೆ, 1400 ಕ್ಕೂ ಹೆಚ್ಚು ಹುಡುಗಿಯರು ಗ್ರೂಮಿಂಗ್ ಗ್ಯಾಂಗ್‌ಗೆ ಬಲಿಯಾಗಿದ್ದಾರೆ. ಈ ವರದಿಯಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಮಾನಸಿಕ ಶೋಷಣೆಯ ಹೊರತಾಗಿ, ಈ ಹುಡುಗಿಯರನ್ನು ಕಳ್ಳಸಾಗಣೆ ಮಾಡಲಾಗಿದೆ ಎಂದು ಮೊದಲು ಬಹಿರಂಗಪಡಿಸಲಾಯಿತು.

ಪಾಕಿಸ್ತಾನಿ ಮೂಲದ ಹೆಚ್ಚಿನ ಬ್ರಿಟಿಷ್ ನಾಗರಿಕರು ಇದಕ್ಕೆ ಕಾರಣರಾಗಿದ್ದರು. ಜನಾಂಗೀಯ ಎಂಬ ಹಣೆಪಟ್ಟಿ ಕಟ್ಟುವ ಭಯದಿಂದ ಬ್ರಿಟಿಷ್ ಅಧಿಕಾರಿಗಳು ಕೂಡ ಈ ವಿಷಯದಲ್ಲಿ ಮಧ್ಯಪ್ರವೇಶಿಸಲಿಲ್ಲ ಎಂಬುದು ಅತ್ಯಂತ ಸಂವೇದನಾಶೀಲ ಬಹಿರಂಗವಾಗಿದೆ. ಬಾಲಕಿಯರ ಅಹವಾಲು ಬರೆಸಿಲ್ಲ, ಬರೆದರೂ ಕ್ರಮ ಕೈಗೊಂಡಿಲ್ಲ. ನಿರ್ಗಮಿತ ಬ್ರಿಟಿಷ್ ಪ್ರಧಾನಿ ರಿಷಿ ಸುನಕ್ ಅಂದಗೊಳಿಸುವ ಗ್ಯಾಂಗ್‌ಗಳನ್ನು ಎದುರಿಸಲು ಕಾರ್ಯಪಡೆಯನ್ನು ರಚಿಸಿದ್ದರು.

# ಟೆಕ್ಕಿ ಅತುಲ್ ಸುಭಾಷ್ ಪುತ್ರ ಯಾರ ಸುಪರ್ದಿಗೆ?

**ನವದೆಹಲಿ:** ಪತ್ನಿಯ ಕಿರುಕುಳದ ಆರೋಪದಿಂದ ಆತ್ಮಹತ್ಯೆ ಮಾಡಿಕೊಂಡ ಟೆಕ್ಕಿ ಅತುಲ್ ಸುಭಾಷ್ ಅವರ 4 ವರ್ಷದ ಮಗನನ್ನು ತಮ್ಮ ಸುಪರ್ದಿಗೆ ನೀಡಬೇಕು ಎಂದು ಕೋರಿ ಆತನ ಕುಟುಂಬಸ್ಥರು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಅರ್ಜಿಯ ವಿಚಾರಣೆ ಮಂಗಳವಾರ ನಡೆಯಿತು.

ಮೃತ ಟೆಕ್ಕಿಯ ತಾಯಿ ಮತ್ತು ಮಗುವಿನ ಅಜ್ಜಿಯೂ ಆದ ಅಂಜು ದೇವಿ ಅವರು ಮಗುವಿನ ಪಾಲನೆ, ಪೋಷಣೆಯನ್ನು ನಾವು ನೋಡಿಕೊಳ್ಳುತ್ತೇವೆ. ತನ್ನ ಮೊಮ್ಮಗನನ್ನು ಆರೋಪಿ ತಾಯಿಯ ವಶಕ್ಕೆ ನೀಡಬಾರದು ಎಂದು ವಾದಿಸಿದ್ದಾರೆ.

ಆದರೆ, 4 ವರ್ಷದ ಮಗು ಅಜ್ಜಿಗೆ ಇನ್ನೂ ಅಪರಿಚಿತವಾಗಿದೆ. ಅತುಲ್ ಅವರ ಪತ್ನಿ ನಿಕಿತಾ ಸಿಂಘಾನಿಯಾ ಅಪರಾಧಿ ಎಂದು ಇನ್ನೂ ಸಾಬೀತಾಗಿಲ್ಲ. ಹೀಗಾಗಿ ಮಗುವನ್ನು ಯಾರ ಸುಪರ್ದಿಗೆ ನೀಡಬೇಕು ಎಂದು ನಿರ್ಧರಿಸಲು ಮತ್ತಷ್ಟು ಸಮಯ ಬೇಕು ಎಂದು ನ್ಯಾಯಮೂರ್ತಿ ಬಿ. ವಿ. ನಾಗರತ್ನ ಅವರಿದ್ದ ಪೀಠ ಹೇಳಿದೆ.

ತನ್ನ ಮೊಮ್ಮಗ ಇನ್ನೂ 4 ವರ್ಷದವನಿದ್ದಾನೆ. ಹೀಗಾಗಿ ಆತನನ್ನು ಬೋರ್ಡಿಂಗ್ ಶಾಲೆಗೆ ಹಾಕಬಾರದು. ತನ್ನ ಕಣ್ಣ ಮುಂದೆ ಬೆಳೆಯಲಿ. ಹೀಗಾಗಿ



ಮಗುವನ್ನು ನನಗೆ ಕೊಡಿಸಿ ಎಂದು ಅಜ್ಜಿ ಅಂಜುದೇವಿ ಅವರು ಕೋರ್ಟ್ ಮುಂದೆ ಭಿನ್ನವಿಸಿಕೊಂಡಿದ್ದಾರೆ.

ಮಕ್ಕಳ ಪಾಲನೆ ವಿಚಾರವು ಸೂಕ್ಷ್ಮವಾಗಿರುವ ಕಾರಣ ಸೂಕ್ತ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಬೇಕಾಗುತ್ತದೆ. ಸಾಧ್ಯವಾದರೆ, ಒಮ್ಮೆ ಮಗುವನ್ನು ಕೋರ್ಟ್‌ಗೆ ಹಾಜರುಪಡಿಸಿ ಎಂದು ಅಂಜು ದೇವಿ ಅವರ ಪರ ವಕೀಲರಿಗೆ ಕೋರ್ಟ್ ಸೂಚಿಸಿತು. ಜೊತೆಗೆ, ಮಗುವಿನ ಪಾಲನೆಗೆ ಸಂಬಂಧಿಸಿದಂತೆ ಹರಿಯಾಣ ಸರ್ಕಾರ ಮತ್ತು ಮಗುವಿನ ತಾಯಿಯಿಂದ ಅಫಿಡವಿಟ್ ಸಲ್ಲಿಸಲು ತಾಕೀತು ಮಾಡಿ, ಮುಂದಿನ ವಿಚಾರಣೆಯನ್ನು ಜನವರಿ 20ಕ್ಕೆ ನಿಗದಿಪಡಿಸಿದೆ.

**ಹರಿಯಾಣ ಬೋರ್ಡ್ ಶಾಲೆಯಲ್ಲಿ ಬಾಲಕ**: ಇದೇ ವೇಳೆ, ಮಗುವಿನ ಬಗ್ಗೆ ಕೋರ್ಟ್ ಕೇಳಿದ್ದ ಮಾಹಿತಿಯನ್ನು ಆರೋಪಿ ಪತ್ನಿ ನಿಕಿತಾ ಸಿಂಘಾನಿಯಾ ಸಲ್ಲಿಸಿದ್ದಾರೆ. ಸದ್ಯ ಬಾಲಕ ಹರಿಯಾಣದ ಫರಿದಾಬಾದ್‌ನ ಬೋರ್ಡಿಂಗ್ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾನೆ ಎಂದು ಮಂಗಳವಾರ ಮಾಹಿತಿ ತಿಳಿಸಿದ್ದಾರೆ.

ಸಿಂಘಾನಿಯಾ ಅವರ ಪರ ವಕೀಲರು ನ್ಯಾಯಮೂರ್ತಿ ಬಿ.ವಿ.ನಾಗರತ್ನ ನೇತೃತ್ವದ ಪೀಠಕ್ಕೆ ಬಾಲಕನ ಬಗ್ಗೆ ವರದಿ ನೀಡಿದ್ದು, ಬೆಂಗಳೂರಿಗೆ ಕರೆದೊಯ್ದು ಅಲ್ಲಿಯೇ ತನ್ನ ತಾಯಿಯೊಂದಿಗೆ ಉಳಿಸಿಕೊಳ್ಳುವುದಾಗಿ ವಕೀಲರು ಮನವಿ ಮಾಡಿದರು.

ಉತ್ತರಪ್ರದೇಶ ಮೂಲದ ಟೆಕ್ಕಿ ಅತುಲ್ ಸುಭಾಷ್ ಅವರು ಬೆಂಗಳೂರಿನಲ್ಲಿ ಉದ್ಯೋಗಿಯಾಗಿದ್ದರು. ಪತ್ನಿ ನಿಕಿತಾ ಸಿಂಘಾನಿಯಾ ಮತ್ತು ಅವರ ಕುಟುಂಬಸ್ಥರು ತಮ್ಮ ವಿರುದ್ಧ ಸುಳ್ಳು ಆರೋಪಗಳ ಕೇಸ್ ದಾಖಲಿಸಿ ಮಾನಸಿಕ ಹಿಂಸೆ ನೀಡಿದ್ದಾರೆ ಎಂದು ದೂರಿ, 2024 ರ ಡಿಸೆಂಬರ್‌ನಲ್ಲಿ ವಿಡಿಯೋ ಚಿತ್ರೀಕರಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ಸದ್ಯ ಅವರಿಗೆ ಕೋರ್ಟ್ ಜಾಮೀನು ನೀಡಿದೆ.

# ಪ್ರಧಾನಿ ಮೋದಿ ಎರಡು ದಿನಗಳ ಪ್ರವಾಸ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಎರಡು ದಿನಗಳ ಆಂಧ್ರಪ್ರದೇಶ ಮತ್ತು ಒಡಿಶಾ ಪ್ರವಾಸ ಕೈಗೊಳ್ಳಲಿದ್ದಾರೆ. ಪ್ರಧಾನಿ ಮೋದಿ ಅವರು ಜನವರಿ 8 ರಂದು ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಸುಮಾರು 2 ಲಕ್ಷ ಕೋಟಿ ರೂಪಾಯಿಗಳ ಯೋಜನೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಅದೇ ಸಮಯದಲ್ಲಿ, ಪ್ರಧಾನಿ ಮೋದಿ ಗುರುವಾರ ಜನವರಿ 9 ರಂದು ಒಡಿಶಾದ ರಾಜಧಾನಿ ಭುವನೇಶ್ವರದಲ್ಲಿ 18 ನೇ ಪ್ರವಾಸಿ ಭಾರತೀಯ ದಿವಸ್ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಈ ವೇಳೆ ಪ್ರಧಾನಿಯವರು ಪ್ರವಾಸಿ ಭಾರತೀಯ ಎಕ್ಸ್‌ಪ್ರೆಸ್‌ಗೆ ಚಾಲನೆ ನೀಡಲಿದ್ದಾರೆ.

ಹಸಿರು ಇಂಧನ ಮತ್ತು ಸುಸ್ಥಿರ ಭವಿಷ್ಯದತ್ತ ತನ್ನ ಬದ್ಧತೆಯ ಕಡೆಗೆ ಮತ್ತೊಂದು ಪ್ರಮುಖ ಹೆಜ್ಜೆಯಾಗಿ, ಆಂಧ್ರಪ್ರದೇಶದ ವಿಶಾಖಪಟ್ಟಣಂ ಬಳಿಯ ಪುಡಿಮಾಡಕದಲ್ಲಿ ಅತ್ಯಾಧುನಿಕ ಓಖಿಕಅ ಗ್ರೀನ್ ಎನರ್ಜಿ ಲಿಮಿಟೆಡ್‌ನ ಗ್ರೀನ್ ಹೈಡ್ರೋಜನ್ ಹಬ್ ಯೋಜನೆಗೆ ಪ್ರಧಾನಮಂತ್ರಿ ಶಂಕುಸ್ಥಾಪನೆ ಮಾಡಲಿದ್ದಾರೆ.



ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಅಡಿಯಲ್ಲಿ ಇದು ಮೊದಲ ಹಸಿರು ಹೈಡ್ರೋಜನ್ ಹಬ್ ಆಗಿದೆ. ಈ ಯೋಜನೆಯಲ್ಲಿ ಅಂದಾಜು 1,85,000 ಕೋಟಿ ರೂಪಾಯಿ ಹೂಡಿಕೆಯಾಗಲಿದೆ. ಇದು 20 ಉಘ ನವೀಕರಿಸಬಹುದಾದ ಇಂಧನ ಸಾಮರ್ಥ್ಯಗಳಲ್ಲಿ ಹೂಡಿಕೆಯನ್ನು ಒಳಗೊಂಡಿರುತ್ತದೆ. ಇದು ಭಾರತದಲ್ಲಿನ ಅತಿ ದೊಡ್ಡ ಸಮಗ್ರ ಹಸಿರು ಹೈಡ್ರೋಜನ್ ಉತ್ಪಾದನಾ ಸೌಲಭ್ಯಗಳಲ್ಲಿ ಒಂದಾಗಿದೆ. ಇದು 1500 ಖಿಕಅ ಹಸಿರು ಹೈಡ್ರೋಜನ್ ಮತ್ತು 7500 TPD ಹಸಿರು ಹೈಡ್ರೋಜನ್ ಉಪ-ಉತ್ಪನ್ನಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.

ಈ ಯೋಜನೆಯು 2030ರ ವೇಳೆಗೆ 500 ಉಘ ಪಳೆಯುಳಿಕೆ ರಹಿತ ಶಕ್ತಿ ಸಾಮರ್ಥ್ಯದ ಭಾರತದ ಗುರಿಯನ್ನು ಸಾಧಿಸಲು ಗಣನೀಯ ಕೊಡುಗೆ ನೀಡುತ್ತದೆ. ಆಂಧ್ರಪ್ರದೇಶದಲ್ಲಿ 19,500 ಕೋಟಿ ರೂ.ಗೂ ಹೆಚ್ಚು ವೆಚ್ಚದ ವಿವಿಧ ರೈಲ್ವೇ ಮತ್ತು ರಸ್ತೆ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ಮತ್ತು ಉದ್ಘಾಟನೆಯನ್ನು ಪ್ರಧಾನಿ ನೆರವೇರಿಸಲಿದ್ದಾರೆ. ಈ ಯೋಜನೆಗಳು ದಟ್ಟಣೆಯನ್ನು ಕಡಿಮೆ ಮಾಡುತ್ತದೆ, ಸಾರಿಗೆ ಸಂಪರ್ಕವನ್ನು ಸುಧಾರಿಸುತ್ತದೆ ಮತ್ತು ಪ್ರಾದೇಶಿಕ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುತ್ತದೆ ಎಂದು ಪಿಎಂಒ ಹೇಳಿದೆ. ವಿಶಾಖಪಟ್ಟಣಂ-ಚೆನ್ನೈ ಇಂಡಸ್ಟ್ರಿಯಲ್ ಕಾರಿಡಾರ್ ಮತ್ತು ವಿಶಾಖಪಟ್ಟಣಂ-ಕಾಕಿನಾಡ ಪೆಟ್ರೋಲಿಯಂ, ರಾಸಾಯನಿಕ ಮತ್ತು ಪೆಟ್ರೋಕೆಮಿಕಲ್ ಹೂಡಿಕೆ ಪ್ರದೇಶಕ್ಕೆ ಸಮೀಪವಿರುವ ಕಾರಣ ಬಲ್ಕ್ ಡ್ರಗ್ ಪಾರ್ಕ್ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸುತ್ತದೆ ಮತ್ತು ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ ಎಂದು ಪಿಎಂಒ ಹೇಳಿದೆ.

# ಮಿಸ್ ವರ್ಲ್ಡ್ ಟೂರಿಸಂ ಕಿರೀಟ ಗೆದ್ದ ನಟಿ ಇಶಿಕಾ ತನೇಜಾ

**ಮಧ್ಯಪ್ರದೇಶ:** ಸಿನಿಮಾ ನಟಿ ಹಾಗೂ ಮಿಸ್ ವರ್ಲ್ಡ್ ಟೂರಿಸಂ ಬ್ಯುಸಿನೆಸ್ ವುಮೆನ್ ಆಫ್ ದಿ ವರ್ಲ್ಡ್ ಪ್ರಶಸ್ತಿ ಗೆದ್ದ ಇಶಿಕಾ ತನೇಜಾ ಐಹಿಕ ಸುಖಭೋಗಗಳನ್ನು ತೊರೆದು ಸಾಧ್ವಿಯಾಗಿದ್ದಾರೆ. ಸಿನಿಮಾ ಹಾಗೂ ಗ್ಲಾಮರಸ್ ಜಗತ್ತಿನಿಂದ ವಿಮುಖರಾಗಿರುವ ಅವರು ಅಲೌಖಿಕ ದಾರಿಯಲ್ಲಿ ಸಾಗುವ ಗಟ್ಟಿ ನಿರ್ಧಾರ ತಳೆದಿದ್ದಾರೆ. ಜಬಲ್‌ಪುರದ ಶಂಕರಚಾರ್ಯ ಸ್ವಾಮಿ ಸದಾನಂದ ಸರಸ್ವತಿ ಮಹಾರಾಜ್ ಅವರಿಂದ ಇಶಿಕಾ ಸನ್ಯಾಸ ದೀಕ್ಷೆ ಪಡೆದಿದ್ದಾರೆ.



ದೀಕ್ಷೆ ಪಡೆದ ಬಳಿಕ ಮಾತನಾಡಿರುವ ಇಶಿಕಾ, "ಇಂದಿನ ಶಿಕ್ಷಿತ ಯುವಜನತೆ ಧರ್ಮದೊಂದಿಗೆ ಸಂಪರ್ಕ ಬೆಳೆಸಬೇಕು. ನಾನು ಬಾಲ್ಯದಿಂದಲೇ ಧಾರ್ಮಿಕತೆ ಹೊಂದಿದ್ದು ಇದೀಗ ಸಿನಿಮಾ, ಸೌಂದರ್ಯ ಎಲ್ಲವನ್ನೂ ತೊರೆದು ನನ್ನ ಜೀವನವನ್ನೇ ಅದಕ್ಕಾಗಿ ಮುಡುಪಾಗಿಡಲು ಮುಂದಾಗಿದ್ದೇನೆ" ಎಂದರು.

2017ರಲ್ಲಿ ಮಿಸ್ ವರ್ಲ್ಡ್ ಟೂರಿಸಂ ಆಗಿದ್ದ ಇಶಿಕಾ: ಇಶಿಕಾ ತನೇಜಾ 2017ರಲ್ಲಿ ಮಿಸ್ ವರ್ಲ್ಡ್ ಟೂರಿಸಂ) ಕಿರೀಟ ಮುಡಿಗೇರಿಸಿಕೊಂಡಿದ್ದರು. ಅಷ್ಟೇ ಅಲ್ಲ, ಬ್ಯುಸಿನೆಸ್ ವುಮೆನ್ ಆಫ್ ದಿ ವರ್ಲ್ಡ್ ಪ್ರಶಸ್ತಿಯನ್ನೂ ಪಡೆದಿದ್ದರು. ಭಾರತದ 100 ಮಹಿಳಾ ಸಾಧಕರಲ್ಲಿ ಒಬ್ಬರಾಗಿರುವ ಇವರು ರಾಷ್ಟ್ರಪತಿಗಳಿಂದಲೂ ಪ್ರಶಸ್ತಿ ಪಡೆದಿದ್ದರು.

ಮಂಗಳವಾರ ದೀಕ್ಷೆ ಪಡೆದ ಇಶಿಕಾ ತನೇಜಾ, ಸಂಪೂರ್ಣವಾಗಿ ಸಾಧ್ವಿ ದಿರಿಸಿನಲ್ಲಿ ಕಾಣಿಸಿ ಕೊಂಡರು. ಬಳಿಕ ಜ್ಯೋತಿಷ್ ಪೀಠ ಮತ್ತು ದ್ವಾರಕಾ ಪೀಠದ ಶಂಕರಾಚಾರ್ಯ ಸ್ವಾಮಿ ಸದಾನಂದ ಸರಸ್ವತಿ ಅವರಿಂದ ಆಶೀರ್ವಾದ ಪಡೆದರು.

ಬಾಲ್ಯದಿಂದಲೂ ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ: "ನಾನು ಬಾಲ್ಯದಿಂದಲೂ ಧಾರ್ಮಿಕತೆಯ ಬಗ್ಗೆ ಆಸಕ್ತಿ ಹೊಂದಿದ್ದೆ. ಶ್ರೀ ರವಿಶಂಕರ್ ಮತ್ತು ಇಸ್ಕಾನ್‌ನಲ್ಲಿ ಧ್ಯಾನ ಕಲಿತೆ. ಈ ಮೊದಲೇ ಈ ಎಲ್ಲಾ ವಿಷಯಗಳೊಂದಿಗೆ ನಾನು ಸಂಪರ್ಕದಲ್ಲಿದ್ದೆ. ಇದೀಗ ನನ್ನ ಸಂಪೂರ್ಣ ಜೀವನವನ್ನು ಆಧ್ಯಾತ್ಮಿಕತೆಯೊಂದಿಗೆ ಕಳೆಯಲು ನಿರ್ಧರಿಸಿದ್ದೇನೆ. ಇದು ನಾನು ಧಾರ್ಮಿಕತೆಯೊಂದಿಗೆ ಬೆಸೆಯುವ ಸಮಯ. ನನಗೆ ಅನ್ನಿಸಿದ ಮಟ್ಟಿಗೆ ಯುವಜನತೆ ತಮ್ಮ ಶಕ್ತಿ ಮತ್ತು ಸಮಯವನ್ನು ಧಾರ್ಮಿಕತೆಯಲ್ಲಿ ವಿನಿಯೋಗಿಸಬೇಕು ಎಂದು ನನಗನಿಸುತ್ತಿದೆ" ಎಂದರು.

ಜಬಲ್‌ಪುರದಲ್ಲಿ ಗುರು ದೀಕ್ಷೆ ಪಡೆಯಲು ಕಾರಣ: "ಶಂಕರಾಚಾರ್ಯರು ಜಬಲ್ಪುರದಲ್ಲಿದ್ದಾರೆ ಎಂದು ತಿಳಿದು ಗುರುದೀಕ್ಷೆ ತೆಗೆದುಕೊಳ್ಳಲು ಬಂದೆ. ಅವರ ಆದೇಶದ ಮೇರೆಗೆ ನಾನು ಜಬಲ್ಪುರಕ್ಕೆ ಆಗಮಿಸಿ ಅವರ ಆಶೀರ್ವಾದ ಪಡೆದು ಗುರು ಮಂತ್ರವನ್ನು ಸ್ವೀಕರಿಸಿದೆ. ಈಗ ಅವರ ಆದೇಶದಂತೆಯೇ ಧರ್ಮ ಮಾರ್ಗದಲ್ಲಿ ಮುನ್ನಡೆಯುತ್ತೇನೆ" ಎಂದು ತಿಳಿಸಿದರು.

# ಆರೋಗ್ಯ ತಪಾಸಣಾ ಶಿಬಿರ ಸದ್ಬಳಕೆಗೆ ಸಲಹೆ ಲಕ್ಷ್ಮೀ ನಾರಾಯಣ್

**ಚೇಳೂರು:** ಮನುಷ್ಯನಿಗೆ ಮುಖ್ಯವಾಗಿ ಶಿಕ್ಷಣ ಮತ್ತು ಅರೋಗ್ಯ ಬೇಕಾಗಿದೆ,ಇವೆರಡೂ ಇಲ್ಲ ಎಂದರೆ ಮನುಷ್ಯ ಸ್ವತಂತ್ರವಾಗಿ ಜೀವನ ನಡೆಸಲು ಕಷ್ಟಕರವಾಗಿದೆ.ಮುಖ್ಯವಾಗಿ ಚೇಳೂರು ಗಡಿ ತಾಲ್ಲೂಕಿನ ಜನತೆ ತುಂಬಾ ಬಡವರಾಗಿದ್ದು, ಕೂಲಿನಾಲಿ ಮಾಡಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ.ಆರ್ಥಿಕವಾಗಿ ಹಿಂದುಳಿದಿದ್ದು. ಉಚಿತ ಆರೋಗ್ಯ ತಪಾಸಣೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕಾಗಿದೆ ಎಂದು ಎಂ ಎಸ್ ರಾಮಯ್ಯ ಆಸ್ಪತ್ರೆಯ ಜನ ಸಂಪರ್ಕ ಅಧಿಕಾರಿ ಲಕ್ಷ್ಮೀ ನಾರಾಯಣ ಹೇಳಿದರು.

ಚೇಳೂರು ಪಟ್ಟಣದ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಮಂಗಳವಾರ ಚಿಕ್ಕಬಳ್ಳಾಪುರ ಜಿಲ್ಲಾ ಬ್ರಾಹ್ಮಣ ಸಭಾ,ಅಕ್ಷಯ ಫೌಂಡೇಶನ್ ಟ್ರಸ್ಟ್ ಹಾಗೂ ಚೇಳೂರು ತಾಲ್ಲೂಕು ಬ್ರಾಹ್ಮಣ ಸಭಾ ಮತ್ತು ವಿವಿಧ ಸಂಘ ಸಂಸ್ಥೆಗಳು ಹಾಗೂ ಎಂ.ಎಸ್.ರಾಮಯ್ಯ ವೈದ್ಯಕೀಯ ಕಾಲೇಜು ಆಸ್ಪತ್ರೆ, ಬೆಂಗಳೂರು ಇವರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಾಸ್ತ್ರ ಚಿಕಿತ್ಸೆ ಶಿಭಿರದ ಪೂರ್ವಭಾವ ಸಭೆ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಇದೇ ಜ.12ರ ಭಾನುವಾರ ಚೇಳೂರು ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ನಡೆಯುವ ಉಚಿತ ಆರೋಗ್ಯ ತಪಾಸಣೆಯಲ್ಲಿ ಸಾಮಾನ್ಯ ರೋಗ ವಿಭಾಗ,ಮೂತ್ರಪಿಂಡದ ಶಸ್ತ್ರ ಚಿಕಿತ್ಸೆ, ನರರೋಗ, ಸುಟ್ಟ ಗಾಯ, ಮಕ್ಕಳ ಶಸ್ತ್ರ ಚಿಕಿತ್ಸೆ, ಮೂಳೆ ವಿಭಾಗ, ಕ್ಯಾನ್ಸರ್, ಹೃದಯ, ಸ್ತ್ರೀ ರೋಗ, ಸೇರಿದಂತೆ ಹಲವಾರು ಚಿಕಿತ್ಸಾ ವಿಭಾಗಗಳ ಸೇವಾ ಸೌಲಭ್ಯಗಳು ದೊರೆಯುತ್ತಿದ್ದು ಅವುಗಳನ್ನು ಸದುಪಯೋಗ ಪಡೆದುಕೊಂಡು ಈ ಉಚಿತ ಶಿಭಿರದಲ್ಲಿ ಪಾಲ್ಗೊಳ್ಳುವವರು ತಪ್ಪದೇ ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ತರಬೇಕೆಂದು ಮನವಿ ಮಾಡಿದರು.

# ಆರು ತಾಲ್ಲೂಕುಗಳಲ್ಲಿನ ಅಂತಿಮ ಮತದಾರರ ಪಟ್ಟಿ ಪ್ರಕಟಣೆ

**ಚಿಕ್ಕಬಳ್ಳಾಪುರ:** ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳ ಆರು ತಾಲ್ಲೂಕುಗಳಲ್ಲಿನ ಅಂತಿಮ ಮತದಾರರ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್. ರವಿಂದ್ರ ಅವರು ಮಾಹಿತಿ ನೀಡಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ನ್ಯಾಯಾಲಯ ಸಭಾಂಗಣದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅಂತಿಮ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಬಗ್ಗೆ ಮಾಹಿತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

2025ರ ಜನವರಿ ಒಂದರಿಂದ ಅನ್ವಯವಾಗುವಂತೆ ಮತದಾರ ಪಟ್ಟಿಯನ್ನು ಪರಿಷ್ಕರಿಸಲಾಗಿದ್ದು ಅದರಂತೆ ಜಿಲ್ಲಾದ್ಯಂತ 10,61,584 ಮಂದಿ ಮತದಾರರು ಇದ್ದು ಈ ಪೈಕಿ 5,22,817 ಪುರುಷ ಮತದಾರರು, 5,38767 ಮಹಿಳಾ ಮತದಾರರು ಮತ್ತು 90 ಮಂದಿ ಇತರರು ಇದ್ದಾರೆ ಎಂದು ತಿಳಿಸಿದರು.

ಜಿಲ್ಲೆಯ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ನಂತರ ಜಿಲ್ಲೆಯಲ್ಲಿ 4,659 ಪುರುಷ ಹಾಗೂ 7,029 ಮಹಿಳಾ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲಾಗಿದ್ದು, ಒಟ್ಟು 11,688 ಮತದಾರರು ಹೆಚ್ಚಾಗಿದ್ದಾರೆ. ಪ್ರಸ್ತುತ 85 ವರ್ಷ ಮೇಲ್ಪಟ್ಟವರು 12,697, ಯುವ ಮತದಾರರು 14,431, ವಿಶೇಷ ಚೇತನ ಮತದಾರರು 17,132 ಇದ್ದಾರೆ ಎಂದರು.



**ವಿಧಾನಸಭಾವಾರು ವಿವರ:** ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ 1,03,164 ಪುರುಷ ಮತದಾರರು, 1,07,115 ಮಹಿಳಾ ಮತದಾರರು ಮತ್ತು 13 ಮಂದಿ ಇತರರು ಸೇರಿ ಒಟ್ಟು 2,10,279 ಮತದಾರರು ಇದ್ದಾರೆ.

ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ 1,02,759 ಪುರುಷ ಮತದಾರರು,1,04,278 ಮಹಿಳಾ ಮತದಾರರು ಮತ್ತು 8 ಮಂದಿ ಇತರರು ಸೇರಿ ಒಟ್ಟು 2,07,037 ಮತದಾರರು ಇದ್ದಾರೆ.

ಚಿಂತಾಮಣಿ ವಿಧಾನಸಭಾ ಕ್ಷೇತ್ರದಲ್ಲಿ 1,12,896 ಪುರುಷ ಮತದಾರರು,1,17,061 ಮಹಿಳಾ ಮತದಾರರು ಮತ್ತು 38 ಮಂದಿ ಇತರರು ಸೇರಿ ಒಟ್ಟು 2,29,957 ಮತದಾರರು ಇದ್ದಾರೆ

ಗೌರಿಬಿದನೂರು ವಿಧಾನಸಭಾ ಕ್ಷೇತ್ರದಲ್ಲಿ 1,03,466 ಪುರುಷ ಮತದಾರರು,1,07,184 ಮಹಿಳಾ ಮತದಾರರು ಮತ್ತು 4 ಮಂದಿ ಇತರರು ಸೇರಿ ಒಟ್ಟು 2,10,650 ಮತದಾರರು ಇದ್ದಾರೆ.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ 1,00,532 ಪುರುಷ ಮತದಾರರು,1,03,129 ಮಹಿಳಾ ಮತದಾರರು ಮತ್ತು 27 ಮಂದಿ ಇತರರು ಸೇರಿ ಒಟ್ಟು 2,03,661 ಮತದಾರರು ಇದ್ದಾರೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 1293 ಮತಗಟ್ಟೆಗಳಿದ್ದು, ಇದರಲ್ಲಿ ನಗರ ಪ್ರದೇಶದಲ್ಲಿ 1058 ಮತಗಟ್ಟೆಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 235 ಮತಗಟ್ಟೆಗಳಿವೆ ಎಂದು ಹೇಳಿದರು.

ಮತದಾರ ಪಟ್ಟಿ ಸೇರ್ಪಡೆ ಸಂಬಂಧ

ಹೆಚ್ಚಿನ ಮಾಹಿತಿಗಾಗಿ ಮತದಾರರ ಮುಖ್ಯ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಬಹುದು. ಓಗಿಖಕ – ಗಿಠಣಜಡಿ ಊಜಟಠಿಟುಟಿಜ ಒಠಿಭುಟಜ ೦ಠಿಠಿ ಮುಖಾಂತರ ಸಾರ್ವಜನಿಕರು ಮತದಾರರ ಪಟ್ಟಿಯಲ್ಲಿ ಹೆಸರುಗಳ ಸೇರ್ಪಡೆ, ತಿದ್ದುಪಡಿ, ತೆಗೆದು ಹಾಕಲು, ವರ್ಗಾವಣೆಗಾಗಿ ಅರ್ಜಿ ಸಲ್ಲಿಸಲು ಮತ್ತು ಇ-ಎಪಿಕ್ (ಭಾವಚಿತ್ರವುಳ್ಳ ಮತದಾರರ ಗುರುತಿನ ಚೀಟಿ) ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ವೋಟರ್ ಸಹಾಯವಾಣಿ ಮೊಬೈಲ್ ಆ್ಯಪ್‌ನಲ್ಲಿ ಚುನಾವಣೆಗೆ ಹಾಗೂ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಇತರೆ ಮಾಹಿತಿಗಳನ್ನು ಸಹ ಅಳವಡಿಸಲಾಗಿರುತ್ತದೆ. ಮೊಬೈಲ್ ಆ್ಯಪ್‌ನ ಮುಖಾಂತರ ಡೌನ್‌ಲೋಡ್ ಮಾಡಿಕೊಂಡು ಈ ಸುವರ್ಣಾವಕಾಶವನ್ನು ಉಪಯೋಗಿಸಿಕೊಳ್ಳಲು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಎನ್.ಭಾಸ್ಕರ್, ಚುನಾವಣಾ ತಹಸೀಲ್ದಾರ್ ಕೆ.ಶ್ವೇತಾ, ವಾರ್ತಾ ಮತ್ತು ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಜುಂಜಣ್ಣ, ಮತ್ತಿತರರಿದ್ದರು.

# ಸಹೋದ್ಯೋಗಿಯ ಹತ್ಯೆ

**ಮಹಾರಾಷ್ಟ್ರ:** ಹಣದ ವಿಚಾರಕ್ಕೆ ಸಹೋದ್ಯೋಗಿಗಳ ನಡುವೆ ನಡೆದ ವಾಗ್ವಾದ ಕೊಲೆಯಲ್ಲಿ ಅಂತ್ಯ ಕಂಡಿದೆ. ಬಿಪಿಒದಲ್ಲಿ ಕೆಲಸ ಮಾಡುತ್ತಿದ್ದ ಯುವತಿಯನ್ನು ಸಹೋದ್ಯೋಗಿ ಯುವಕನೇ ಚಾಕುವಿನಿಂದ ಇರಿದು ಹತ್ಯೆಗೈದ ಘಟನೆ ಮಂಗಳವಾರ ನಡೆದಿದೆ. ಇಲ್ಲಿನ ಯರವಾಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಯರವಾಡದಲ್ಲಿರುವ ಬಿಪಿಒವೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವಕ ಕಂಪನಿಯ ಪಾರ್ಕಿಂಗ್ ಸ್ಥಳದಲ್ಲಿ ಈ ಕೃತ್ಯ ಎಸಗಿದ್ದಾನೆ. ಕಾಟ್ರಾಜ್ ಎಂಬಲ್ಲಿನ ನಿವಾಸಿ ಶುಭದಾ ಶಂಕರ್ ಕೊಡರೆ (28) ಕೊಲೆಗೀಡಾದ ಯುವತಿ. ಶಿವಾಜಿನಗರ ನಿವಾಸಿ ಕೃಷ್ಣ ಸತ್ಯನಾರಾಯಣ ಕನೋಜ (30) ಈ ಕೃತ್ಯ ಎಸಗಿದಾತ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಪೊಲೀಸರು, ಡಬ್ಲ್ಯೂ ಎನ್‌ಎಸ್ ಗ್ಲೋಬಲ್ ಎಂಬ ಸಂಸ್ಥೆಯಲ್ಲಿ ಇಬ್ಬರೂ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಇಬ್ಬರ ನಡುವೆ ವಾಗ್ವಾದ ನಡೆದು ಘಟನೆ ನಡೆದಿದೆ. ಮಂಗಳವಾರ ಸಂಜೆ 6.15ರ ಸುಮಾರಿಗೆ ಹರಿತ ಆಯುಧದಿಂದ ಯುವಕ ಹಲ್ಲೆ ಮಾಡಿದ್ದು, ಆಕೆ ಗಂಭೀರವಾಗಿ ಗಾಯಗೊಂಡು ಸಾವನ್ನಪ್ಪಿದ್ದಾಳೆ ಎಂದು ತಿಳಿಸಿದ್ದಾರೆ.

ತಕ್ಷಣವೇ ಹತ್ತಿರದ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಆಕೆ ಸಾವನ್ನಪ್ಪಿದ್ದಾಳೆ.

ಪಡೆದ ಹಣ ಮರಳಿಸದ್ದಕ್ಕೆ ಕೊಲೆ: ಪೊಲೀಸರ ಪ್ರಾಥಮಿಕ ತನಿಖೆಯ ಪ್ರಕಾರ, ಯುವಕನಿಂದ ಹಣ ಪಡೆದಿದ್ದ ಯುವತಿ ಅದನ್ನು ಹಿಂಪಡೆಯಲು ವಿಫಲವಾಗಿದ್ದಳು. ಈ ಹಿನ್ನೆಲೆಯಲ್ಲಿ ನಡೆದ ಗಲಾಟೆ ಕೊಲೆಯಲ್ಲಿ ಅಂತ್ಯ ಕಂಡಿದೆ ಎಂದು ತಿಳಿದು ಬಂದಿದೆ.

ಮುಸ್ಸಂಜೆ

ಬುಧವಾರ
08-01-2025

“ಅವರ ಎಲ್ಲಾ ಚಿತ್ರಗಳು ವಿಫಲವಾಗಲಿ ಎಂದು ಪದೇ ಪದೇ ದೇವರಲ್ಲಿ ಬೇಡಿಕೊಳ್ಳುತ್ತಿದ್ದೆ. ನನಗೆ ಮುಂಬೈ ಅಂದರೆ ಕಷ್ಟವಾಗಿತ್ತು, ದೆಹಲಿಗೆ ಹಿಂತಿರುಗಬೇಕೆಂದು ನಾನು ಬಯಸುತ್ತಿದ್ದೆ.

# ಶಾರುಖ್ ಚಿತ್ರ ಫ್ಲಾಪ್ ಆಗ್ಲಿ



ಶಾರುಖ್ ಖಾನ್ ಮತ್ತು ಗೌರಿ ಖಾನ್ ಬಾಲಿವುಡ್‌ನಲ್ಲಿ ಎವರ್‌ಗ್ರೀನ್ ಜೋಡಿ. ಇವರ ವಿಷಯ ಒಂದಿಲ್ಲೊಂದು ರೀತಿಯಲ್ಲಿ ಸದ್ದು ಮಾಡುತ್ತಲೇ ಇರುತ್ತದೆ. ಸಿನಿ ಇಂಡಸ್ಟ್ರಿಯಲ್ಲಿ ಮದುವೆ, ವಿಚ್ಛೇದನ, ಅಕ್ರಮ ಸಂಬಂಧ, ಒಂದಕ್ಕಿಂತ ಹೆಚ್ಚು ಮದುವೆ ಎಲ್ಲವೂ ಮಾಮೂಲು. ಆದರೆ ಎಲ್ಲಕ್ಕಿಂತಲೂ ಭಿನ್ನವಾಗಿದೆ ಈ ಜೋಡಿ.

ಹಿಂದೂ–ಮುಸ್ಲಿಂ ಜೋಡಿ ಎನ್ನುವ ಕಾರಣಕ್ಕೆ, ತಮ್ಮೆಲ್ಲಾ ಮಕ್ಕಳಿಗೆ ಖಾನ್ ಎಂದೇ ಸರ್‌ನೇಮ್ ಇಟ್ಟಿರುವುದು ಜೊತೆಗೆ ಪತ್ನಿಗೂ ಗೌರಿ ಖಾನ್ ಎಂದೇ ಹೇಳುವುದು... ಹೀಗೆ ಆಗಾಗ್ಗೆ ಕುಹುಕಗಳು ಕೇಳಿ ಬರುತ್ತಿದ್ದರೂ ಇವರದ್ದು ಆದರ್ಶ ದಾಂಪತ್ಯ ಎನ್ನುವುದು ಸುಳ್ಳಲ್ಲ. ಆದರೆ ಇದರ ನಡುವೆಯೇ ಶಾಕಿಂಗ್ ವಿಷಯವೊಂದನ್ನು ರಿವೀಲ್ ಮಾಡಿದ್ದಾರೆ ಗೌರಿ ಖಾನ್. ಅದೇನೆಂದರೆ, ಶಾರುಖ್ ಅವರ ಚಿತ್ರ ಯಶಸ್ವಿಯಾಗುವುದೇ ಬೇಡ, ಫ್ಲಾಪ್ ಆಗಲಿ ಎಂದು ಸದಾ ತಾವು ಆಶಿಸುತ್ತಿರುವ ವಿಷಯ ಇದಾಗಿದೆ!

ವಿಚಿತ್ರ ಎನಿಸಿದರೂ ಇದು ಸತ್ಯ ಎಂದಿದ್ದಾರೆ ಗೌರಿ ಖಾನ್. ಒಬ್ಬ ವ್ಯಕ್ತಿಯ ಯಶಸ್ಸಿನ ಹಿಂದೆ ಯಾವಾಗಲೂ ಒಬ್ಬ ಮಹಿಳೆ ಇರುತ್ತಾಳೆ. ಆದರೆ ತಮ್ಮ ಪತಿ ಎಂದಿಗೂ ಸಕ್ಸಸ್ ಕಾಣಲೇಬಾರದು ಎಂದು ಆರಂಭದಲ್ಲಿ ಬಯಸಿದವರು ಗೌರಿ ಖಾನ್ ಎಂದಿದ್ದಾರೆ. ಇತ್ತೀಚಿನ ರೆಡ್ಡಿಟ್ ಥ್ರೆಡ್‌ನಿಂದ ಈ ವಿಷಯ ಬಯಲಾಗಿದೆ. ಗೌರಿ ಅವರು ಹೇಳಿದ್ದೇನೆಂದರೆ, ತಮಗೆ ಶಾರುಖ್ ಸಿನಿಮಾದಲ್ಲಿ ನಟಿಸುವುದು ಇಷ್ಟವಿರಲಿಲ್ಲ. ನನಗೆ ಮಾತ್ರವಲ್ಲದೇ ನನ್ನ ತಾಯಿಯ ಮನೆಯಲ್ಲಿಯೂ ಯಾರಿಗೂ ಇಷ್ಟವಿರಲಿಲ್ಲ. ಆದರೆ ಅಚ್ಚರಿ ಎಂದರೆ ನನ್ನ ಕುಟುಂಬದವರೆಲ್ಲಾ ಅವರ ಸಿನಿಮಾ ನೋಡಲು ಹೋಗುತ್ತಿದ್ದರು. ಕ್ರಮೇಣ ಅವರೆಲ್ಲರೂ ಶಾರುಖ್ ಯಶಸ್ಸಿಗೆ ಹಾರೈಸಲು ಶುರು ಮಾಡಿದರು. ಆದರೆ ನಾನು ಮಾತ್ರ ಅದಕ್ಕೆ ವಿರುದ್ಧವಾಗಿದ್ದೆ ಎಂದಿದ್ದಾರೆ. ಆಗ ಶಾರುಖ್ ಖಾನ್ ಇಂಡಸ್ಟ್ರಿಗೆ ಬಂದು ಒಂಬತ್ತು ವರ್ಷಗಳಾಗಿದ್ದವು. ಆರಂಭದಲ್ಲಿ ಹಲವಾರು ಚಿತ್ರಗಳು ಫ್ಲಾಪ್ ಆದವು. ಆದ್ದರಿಂದ ಅವರ ಗಮನವೆಲ್ಲಾ ಅದರ ಮೇಲೆಯೇ ಹೋಯಿತು. ಶಾರುಖ್, ಕೇವಲ ನಟನೆಯಿಂದ ಎಂದಿಗೂ ತೃಪ್ತರಾಗಿರಲಿಲ್ಲ. ಅವರು ಚಲನಚಿತ್ರಗಳ ತಾಂತ್ರಿಕ ಭಾಗಗಳಲ್ಲಿಯೂ ತೊಡಗಿಸಿಕೊಳ್ಳಲು ಬಯಸಿದ್ದರು. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಮುಂಬೈನಲ್ಲಿ ಅಡ್ಜಸ್ಟ್ ಆಗಲು ನನಗೆ ತುಂಬಾ ಕಷ್ಟವಾಯಿತು. ಆದರೆ ಶಾರುಖ್‌ಗೆ ಸಿನಿಮಾವೇ ಪ್ರಪಂಚವಾಗಿತ್ತು. ಸ್ವಲ್ಪ ದಿನ ನೋಡೋಣ. ಮುಂಬೈ ಅಡ್ಜಸ್ಟ್ ಆಗಿಲ್ಲ ಎಂದರೆ ಊರಿಗೆ ಹೋಗೋಣ ಎಂದಿದ್ದರು. ಇದೊಂದೇ ಕಾರಣಕ್ಕೆ ಅವರ ಚಿತ್ರ ಫ್ಲಾಪ್ ಆಗಲಿ ಎಂದೇ ದೇವರಲ್ಲಿ ಬೇಡಿಕೊಳ್ಳುತ್ತಿದ್ದೆ. ಹಾಗಾದರೆ ಅವರು ವಾಪಸ್ ದೆಹಲಿಗೆ ಹೋಗುತ್ತಾರೆ ಎನ್ನುವುದು ನನ್ನ ಆಸೆಯಾಗಿತ್ತು ಎಂದಿದ್ದಾರೆ.

“ಅವರ ಎಲ್ಲಾ ಚಿತ್ರಗಳು ವಿಫಲವಾಗಲಿ ಎಂದು ಪದೇ ಪದೇ ದೇವರಲ್ಲಿ ಬೇಡಿಕೊಳ್ಳುತ್ತಿದ್ದೆ. ನನಗೆ ಮುಂಬೈ ಅಂದರೆ ಕಷ್ಟವಾಗಿತ್ತು, ದೆಹಲಿಗೆ ಹಿಂತಿರುಗಬೇಕೆಂದು ನಾನು ಬಯಸುತ್ತಿದ್ದೆ. ಅದೇ ಸಮಯದಲ್ಲಿ ಅವರ ದೀವಾನಾ ಅಥವಾ ಬಾಜಿಗರ್ ಬ್ಲಾಕ್‌ಬಸ್ಟರ್ ಆಗಿದ್ದವು. ಆದರೆ ಅದು ಕೂಡ ಫ್ಲಾಪ್ ಆಗಲಿ ಎಂದೇ ಇಚ್ಛೆಪಟ್ಟಿದ್ದೆ.

ಅದರಲ್ಲಿ ಅವರು ಹೇಗೆ ನಟಿಸಿದ್ದಾರೆ ಎನ್ನುವುದನ್ನೂ ನಾನು ನೋಡಲಿಲ್ಲ ಎಂದಿದ್ದಾರೆ ಗೌರಿ ಖಾನ್. ಆದರೆ ನನ್ನ ಪ್ರಾರ್ಥನೆ ಈಡೇರಲಿಲ್ಲ. ಕೊನೆಗೂ ಮುಂಬೈನಲ್ಲಿಯೇ ಉಳಿದುಕೊಳ್ಳುವಂತಾಯಿತು. ನಾನು ಅಡ್ಜಸ್ಟ್ ಮಾಡಿಕೊಂಡೆ ಎಂದಿದ್ದಾರೆ.

# ನಾಟಕದಲ್ಲಿನ ನಟನೆಯಿಂದ ‘ಪ್ರೇರಣೆ’



ಮೆಗಾಸ್ಟಾರ್ ಚಿರಂಜೀವಿ. ಎನ್‌ಟಿಆರ್, ಎಎನ್‌ಆರ್, ಶೋಭನ್ ಬಾಬು, ಕೃಷ್ಣ, ಕೃಷ್ಣಂರಾಜು ಮುಂತಾದ ಮೊದಲ ತಲೆಮಾರಿನ ನಾಯಕರ ನಂತರ ಎರಡನೇ ತಲೆಮಾರಿನ ನಟರಲ್ಲಿ ಅಪ್ರತಿಮ ಖ್ಯಾತಿಯನ್ನು ಗಳಿಸಿದ ನಟ. ಪ್ರಸ್ತುತ ಹಿರಿಯ ನಟರಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ವಾಣಿಜ್ಯ ಚಿತ್ರಕ್ಕೆ ಹೊಸ ಅರ್ಥವನ್ನು ನೀಡಿ ಅಪ್ರತಿಮ ಸ್ಟಾರ್ ನಾಯಕನಾಗಿ ಬೆಳೆದಿದ್ದಾರೆ. ಮೆಗಾಸ್ಟಾರ್ ಎಂದು ಗೌರವಿಸಲ್ಪಡುತ್ತಿದ್ದಾರೆ.

ಆದರೆ ಚಿರಂಜೀವಿ ಯಾವುದೇ ಚಿತ್ರರಂಗದ ಹಿನ್ನೆಲೆ ಇಲ್ಲದೆ ಬಂದವರು. ಸ್ವಪ್ರಯತ್ನದಿಂದ ಬೆಳೆದವರು. ಯಾವುದೇ ನಕಾರಾತ್ಮಕತೆಗೆ ಒಳಗಾಗದೆ, ತಮ್ಮ ಗುರಿಗಾಗಿ ಶ್ರಮಿಸಿದರು, ನಿರಂತರವಾಗಿ ದುಡಿದರು. ಅನೇಕ ಅವಮಾನಗಳನ್ನು ಎದುರಿಸಿದರು, ನಿರಾಶೆಗಳನ್ನು ಅನುಭವಿಸಿದರು. ಆದರೆ ಚಿತ್ರರಂಗದಲ್ಲಿ ಯಶಸ್ಸಿನ ಮೂಲಕ ಅವೆಲ್ಲಕ್ಕೂ ಉತ್ತರಿಸಿದರು. ತಮ್ಮ ಬೆಳವಣಿಗೆಯಿಂದಲೇ ಎಲ್ಲರಿಗೂ ಉತ್ತರ ನೀಡಿದರು. ಎಲ್ಲಿಯೂ ಗರ್ವ ತೋರಿಸಲಿಲ್ಲ ಎಂದು ಇತ್ತೀಚೆಗೆ ಖಾಸಗಿ ಕಾರ್ಯಕ್ರಮವೊಂದರಲ್ಲಿ ತಿಳಿಸಿದರು.

ಚಿರಂಜೀವಿ ಚಿತ್ರರಂಗಕ್ಕೆ ಬರಲು ಕಾರಣವೇನು? ಎಂಬುದನ್ನು ಇಲ್ಲಿಯವರೆಗೆ ಹೇಳಿರಲಿಲ್ಲ. ಇದೀಗ ಯಾರಿಗೂ ತಿಳಿಯದ ಸಂಗತಿಗಳನ್ನು ಬಹಿರಂಗಪಡಿಸಿದ್ದಾರೆ ಚಿರು. ನಟನೆಯತ್ತ ಆಸಕ್ತಿ ತೋರಿಸಲು ಕಾರಣವೇನೆಂದು ತಿಳಿಸಿದ್ದಾರೆ. ಕ್ರೀಡೆಗಳೆಂದರೆ ಇಷ್ಟವಂತೆ. ಶಾಲೆಗೆ ಹೋಗುವುದು, ಓದುವುದರಲ್ಲಿ ಆಸಕ್ತಿ ಇಲ್ಲದಿದ್ದರೂ, ಆಟಗಳೆಂದರೆ ಇಷ್ಟವಂತೆ. ಆದರೆ ಯಾವ ಆಟ ಆಡಿದರೂ ಏಟುಗಳು ಬೀಳುತ್ತಿದ್ದವಂತೆ. ಈ ವಿಷಯಗಳನ್ನು ರಿವೀಲ್ ಮಾಡಿದ್ದಾರೆ ಚಿರಂಜೀವಿ.

ಏಳು, ಎಂಟನೇ ತರಗತಿಯಲ್ಲಿ ಬ್ಯಾಡ್ಮಿಂಟನ್ ಆಡಿದರಂತೆ. ಎದುರಿನ ವ್ಯಕ್ತಿ ಗಟ್ಟಿಯಾಗಿ ಹೊಡೆದಾಗ ಆ ಚೆಂಡು ಬಂದು ಕಣ್ಣಿಗೆ ತಗುಲಿ ಕಣ್ಣು ಊದಿಕೊಂಡಿದೆ ಎಂದು ಹೇಳಿದರು. ಇದು ಸರಿಯಲ್ಲ ಎಂದು ವಾಲಿಬಾಲ್ ಆಡಿದರಂತೆ. ಎದುರಿನ ವ್ಯಕ್ತಿ ಗಟ್ಟಿಯಾಗಿ ಚೆಂಡನ್ನು ಹೊಡೆದಾಗ ಕೈಗಳಿಂದ ಹಿಡಿಯಬೇಕಿದ್ದ ಚೆಂಡನ್ನು ಬೆರಳುಗಳಿಂದ ಹಿಡಿದರಂತೆ. ಇದರಿಂದ ಬೆರಳುಗಳು ಬಾಗಿ ನೋವುಂಟಾಯಿತು. ಅದಕ್ಕೆ ಹೆದರಿ ಅದನ್ನೂ ಬಿಟ್ಟುಬಿಟ್ಟರು.

ನಂತರ ಕ್ರಿಕೆಟ್ ಮೇಲೆ ಆಸಕ್ತಿ ಬೆಳೆಸಿಕೊಂಡರಂತೆ. ಕ್ರಿಕೆಟ್ ಆಡುವಾಗ ಚೆಂಡು ಬಂದು ಹೆಬ್ಬೆರಳಿಗೆ ತಗುಲಿ ಬೆರಳು ಊದಿಕೊಂಡಿತು. ಇದರಿಂದ ಆಟಗಳೆಂದರೆ ಭಯವಾಯಿತಂತೆ. ಆಟಗಳು ತನಗೆ ಒಲಿಯಲಿಲ್ಲ ಎಂದು ಬೇಸರಪಟ್ಟುಕೊಂಡರಂತೆ. ಏನು ಮಾಡಬೇಕೆಂದು ಯೋಚಿಸುತ್ತಿರುವಾಗ ಬಿಕಾಂ ಓದುತ್ತಿದ್ದ ಸಮಯದಲ್ಲಿ ಎನ್‌ಸಿಸಿಗೆ ಸೇರಿದರಂತೆ.

ನೌಕಾ ಎನ್‌ಸಿಸಿಯಲ್ಲಿ ಉತ್ತಮ ಸ್ಥಾನಕ್ಕೆ ತಲುಪಿದರಂತೆ. ಎನ್‌ಸಿಸಿಯಲ್ಲಿ ನಾಯಕರಾದರಂತೆ. ಗಣರಾಜ್ಯೋತ್ಸವದಂದು ಸೈನಿಕರೊಂದಿಗೆ ಪಥಸಂಚಲನ ಮಾಡಿದರಂತೆ. ರಾಷ್ಟ್ರಪತಿ, ಪ್ರಧಾನಮಂತ್ರಿಗಳ ಮುಂದೆ ಪಥಸಂಚಲನ ಮಾಡಿದ್ದಕ್ಕೆ ತುಂಬಾ ಸಂತೋಷಪಟ್ಟರಂತೆ ಚಿರಂಜೀವಿ.

ಅದು ಮುಗಿದ ನಂತರ ಮುಂದೇನು ಎಂಬ ಗೊಂದಲ ಉಂಟಾಯಿತು. ಕಾಲೇಜಿನಲ್ಲಿ ನಾಟಕವೊಂದನ್ನು ಪ್ರದರ್ಶಿಸಿದರು. 'ರಾಜೀನಾಮಾ' ಎಂಬ ನಾಟಕದಲ್ಲಿ ಅಧ್ಯಕ್ಷರ ಪಾತ್ರವನ್ನು ನಿರ್ವಹಿಸಿ ಮೆಚ್ಚುಗೆ ಗಳಿಸಿದರಂತೆ. ಅತ್ಯುತ್ತಮ ನಟ ಪ್ರಶಸ್ತಿಯೂ ಬಂದಿತು. ಎಲ್ಲರೂ ಚಪ್ಪಾಳೆ ತಟ್ಟಿದರು, ಪ್ರಶಂಸಿಸಿದರು. ಅದಕ್ಕೂ ಮೊದಲು ಯಾರೂ ತಮ್ಮನ್ನು ಗಮನಿಸುತ್ತಿರಲಿಲ್ಲ, ಆದರೆ ನಂತರ ಎಲ್ಲರೂ ತಮ್ಮತ್ತ ನೋಡುತ್ತಿದ್ದಾರೆ ಎಂದು ಹೆಮ್ಮೆಪಟ್ಟುಕೊಂಡರಂತೆ. ಹುಡುಗಿಯರ ಪ್ರತಿಕ್ರಿಯೆ ನೋಡಿ ಇನ್ನಷ್ಟು ಸಂತೋಷಪಟ್ಟರಂತೆ ಚಿರಂಜೀವಿ. ಆಗ ನಟನೆಯ ಮೇಲೆ ಆಸಕ್ತಿ ಮೂಡಿತು. ನಟನಾಗಬೇಕೆಂಬ ಆಸೆಗೆ ಬೀಜ ಬಿತ್ತಿತು ಎಂದರು ಚಿರು.

ಅಲ್ಲಿಂದ ಚಿತ್ರರಂಗದಲ್ಲಿ ರಾರಾಜಿಸಬೇಕೆಂದು ಪ್ರಯತ್ನಿಸಿದರು. ಚೆನ್ನೈಗೆ ಹೋಗಿ ನಟನಾ ಶಾಲೆಗೆ ಸೇರಿದರಂತೆ. ಅಲ್ಲಿ ಅವರ ನಟನೆ, ನೃತ್ಯ ನೋಡಿ ಚಿತ್ರಗಳ ಆಫರ್‌ಗಳು ಬಂದವು, ಯಾರ ಕಚೇರಿಗೂ ಸುತ್ತು ಹಾಕಲಿಲ್ಲ, ನಂತರ ನಾಯಕನಾಗಿ ಆಫರ್‌ಗಳು ಬಂದವು ಎಂದು ಇದನ್ನು ತಮ್ಮ ಗೆಲುವು ಎಂದು ಭಾವಿಸಿದ್ದಾಗಿ ತಿಳಿಸಿದರು ಚಿರಂಜೀವಿ. ಕ್ರೀಡೆಯಲ್ಲಿ ಕಾಣಿಸಲು ಸಾಧ್ಯವಾಗದ ಕಾರಣ ನಟನೆಯ ಮೇಲೆ ಆಸಕ್ತಿ ಮೂಡಿತು, ಹೀಗೆ ಚಿತ್ರರಂಗಕ್ಕೆ ಬಂದೆ ಎಂದು ಹೇಳಿದರು ಚಿರಂಜೀವಿ. 'ಅಪ್ಟಾ' ವ್ಯಾಪಾರ ಕಾರ್ಯಕ್ರಮದಲ್ಲಿ ಈ ವಿಷಯಗಳನ್ನು ಹಂಚಿಕೊಂಡರು.

ಪ್ರಸ್ತುತ ಚಿರಂಜೀವಿ 'ವಿಶ್ವಂಭರ' ಚಿತ್ರದಲ್ಲಿ ನಟಿಸುತ್ತಿದ್ದಾರೆ. ವಶಿಷ್ಠ ನಿರ್ದೇಶನದ ಈ ಚಿತ್ರವನ್ನು ಯುವಿ ಕ್ರಿಯೇಷನ್ಸ್ ನಿರ್ಮಿಸುತ್ತಿದೆ. ತ್ರಿಷಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಸಾಮಾಜಿಕ ಫ್ಯಾಂಟಸಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ವಿಎಫ್‌ಎಕ್ಸ್‌ಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ವಿಎಫ್‌ಎಕ್ಸ್ ವಿಳಂಬವಾಗುತ್ತಿರುವುದರಿಂದ ಏಪ್ರಿಲ್‌ನಲ್ಲಿ ಚಿತ್ರ ಬಿಡುಗಡೆಯಾಗುವುದು ಕಷ್ಟ ಎನ್ನಲಾಗಿದೆ.

# ಆ ಪಾತ್ರಕ್ಕೆ ಪ್ರಾಮುಖ್ಯತೆ ಏಕೆ?

ಕಳೆದ ವರ್ಷ ಜೂನ್ ತಿಂಗಳಲ್ಲಿ ಬಿಡುಗಡೆ ಆಗಿದ್ದ ‘ಕಲ್ಕಿ 2898 ಎಡಿ’ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಅಬ್ಬರ ಎಬ್ಬಿಸಿತ್ತು. ಭವಿಷ್ಯದಲ್ಲಿ ನಡೆಯುವ ಕತೆಯನ್ನು ತಂತ್ರಜ್ಞಾನ ಬಳಸಿ ಅದ್ಭುತವಾಗಿ ಚಿತ್ರೀಕರಿಸಲಾಗಿತ್ತು. ಸಿನಿಮಾದಲ್ಲಿ ಮಹಾಭಾರತದ ಕತೆಯ ಎಳೆಯನ್ನು ಸಹ ಸೇರಿಸಲಾಗಿತ್ತು. ಸಿನಿಮಾದ ಕ್ಲೈಮ್ಯಾಕ್ಸ್ ಅಂತೂ ಪ್ರೇಕ್ಷಕರಿಗೆ ಬಹಳ ಇಷ್ಟವಾಗಿತ್ತು. ಸಿನಿಮಾದಲ್ಲಿ ಪ್ರಭಾಸ್ ಕರ್ಣನ ಪಾತ್ರದಲ್ಲಿ ಹಾಗೂ ಅಮಿತಾಬ್ ಬಚ್ಚನ್ ಅಶ್ವತ್ಥಾಮನ ಪಾತ್ರದಲ್ಲಿ ನಟಿಸಿದ್ದರು.

ಆದರೆ ಇದೀಗ ತೆಲುಗು ಚಿತ್ರರಂಗದ ಜನಪ್ರಿಯ ವ್ಯಕ್ತಿಯೊಬ್ಬರು ‘ಕಲ್ಕಿ 2898 ಎಡಿ’ ಸಿನಿಮಾವನ್ನು, ಅದರ ಕತೆಯನ್ನು ಕಟು ಮಾತುಗಳಲ್ಲಿ ಟೀಕಿಸಿದ್ದಾರೆ.

2005 ರಿಂದಲೂ ತೆಲುಗು ಚಿತ್ರರಂಗದಲ್ಲಿ ಗೀತ ಸಾಹಿತಿಯಾಗಿ, ಚಿತ್ರಕತೆ ಬರಹಗಾರನಾಗಿ ಕೆಲಸ ಮಾಡುತ್ತಿರುವ ಅನಂತ ಶ್ರೀರಾಮ್, ‘ಕಲ್ಕಿ 2898 ಎಡಿ’ ಸಿನಿಮಾದ ಕತೆಯನ್ನು ಬಹಿರಂಗ ಸಭೆಯಲ್ಲಿ ಟೀಕೆ ಮಾಡಿದ್ದಾರೆ.

ಕೃಷ್ಣ ಜಿಲ್ಲೆಯಲ್ಲಿ ನಡೆದ ಬೃಹತ್ ಹಿಂದೂ ಸಮಾವೇಷದಲ್ಲಿ ಭಾಗವಹಿಸಿ ಮಾತನಾಡಿದ ಅನಂತ್ ಶ್ರೀರಾಮ್, ‘ತೆಲುಗು ಚಿತ್ರರಂಗದಲ್ಲಿ ದಶಕಗಳಿಂದಲೂ ಕರ್ಣನನ್ನು ಹೀರೋ ಆಗಿ ತೋರಿಸುತ್ತಿರುವುದು ನಡೆಯುತ್ತಲೇ ಬಂದಿದೆ. ದಶಕಗಳಿಂದ ಆರಂಭಿಸಿ ನಿಮ್ಮೆ–ಮೊನ್ನೆ ತೆರೆಗೆ ಬಂದ ‘ಕಲ್ಕಿ’ ಸಿನಿಮಾದ ವರೆಗೆ ಕರ್ಣನನ್ನು ಅನವಷ್ಯಕವಾಗಿ ಮಹಾನ್ ಎಂದು ಬಿಂಬಿಸಲಾಗಿದೆ’ ಎಂದಿದ್ದಾರೆ. ‘ಅನವಶ್ಯಕವಾಗಿ



ಕರ್ಣನನ್ನು ಹೀರೋ ಮಾಡಲು ಮುಂದಾಗಿರುವ ತೆಲುಗು ಚಿತ್ರರಂಗದ ಬಗ್ಗೆ ನನಗೆ ಬೇಸರ ಇದೆ, ಅವರ ಈ ಕಾರ್ಯದ ಬಗ್ಗೆ ಚಿತ್ರರಂಗಕ್ಕೆ ಸೇರಿದ ವ್ಯಕ್ತಿಯಾಗಿ ನನಗೆ ನಾಚಿಕೆ ಇದೆ.

ಆಗಿನ ನಿರ್ದೇಶಕರು ಮತ್ತು ಈಗಿನ ನಿರ್ದೇಶಕರೂ ಸಹ ಕರ್ಣನನ್ನು ಸುಖಾ ಸುಮ್ಮನೆ ಹೀರೋ ಮಾಡುತ್ತಿದ್ದಾರೆ. ತಪ್ಪನ್ನು ತಪ್ಪು ಎಂದು ಹೇಳದಿದ್ದರೆ ನಾವು ಹಿಂದೂ ಧರ್ಮವನ್ನು ಆಚರಿಸದಂತೆ ಅಲ್ಲ. ಕರ್ಣನನ್ನು ಅರ್ಜುನನಿಗಿಂತಲೂ ಶ್ರೇಷ್ಠ ಎಂದು ಬಿಂಬಿಸುವುದನ್ನು ನಾವು ವಿರೋಧಿಸಬೇಕಿದೆ ’ ಎಂದು ಅನಂತ್ ಶ್ರೀರಾಮ್ ಹೇಳಿದ್ದಾರೆ.

ಅದೇ ಭಾಷಣದಲ್ಲಿ ಮಾತನಾಡುತ್ತಾ, ತಾವು ವಿಷ್ಣುವಿನ ಕುರಿತಾಗಿ ಸಿನಿಮಾ ಒಂದರಲ್ಲಿ ‘ಬ್ರಹ್ಮಾಂಡ ನಾಯಕುಡು’ (ಬ್ರಹ್ಮಾಂಡ ನಾಯಕ) ಎಂದು ಬರೆದಿದ್ದೆ, ಆದರೆ ಆ ಸಿನಿಮಾದ ನಿರ್ಮಾಪಕ ಅದನ್ನು ತೆಗೆದು ಹಾಕುವಂತೆ ಹೇಳಿದ, ಇದೇ ಕಾರಣಕ್ಕೆ ನಾನು ಆ ಸಿನಿಮಾದಲ್ಲಿ ಕೆಲಸ ಮಾಡುವುದನ್ನು ಕೈ ಬಿಟ್ಟೆ’ ಎಂದು ಅನಂತ್ ಶ್ರೀರಾಮ್ ಹೇಳಿಕೊಂಡಿದ್ದಾರೆ.

ತೆಲುಗು ಚಿತ್ರರಂಗದಲ್ಲಿ ದಶಕಗಳಿಂದಲೂ ಕರ್ಣನನ್ನು ಹೀರೋ ಆಗಿ ತೋರಿಸುತ್ತಿರುವುದು ನಡೆಯುತ್ತಲೇ ಬಂದಿದೆ. ದಶಕಗಳಿಂದ ಆರಂಭಿಸಿ ನಿಮ್ಮೆ–ಮೊನ್ನೆ ತೆರೆಗೆ ಬಂದ ‘ಕಲ್ಕಿ’ ಸಿನಿಮಾದ ವರೆಗೆ ಕರ್ಣನನ್ನು ಅನವಷ್ಯಕವಾಗಿ ಮಹಾನ್ ಎಂದು ಬಿಂಬಿಸಲಾಗಿದೆ

‘ಕಲ್ಕಿ 2898 ಎಡಿ’ ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಕರ್ಣನ ಪಾತ್ರಧಾರಿಯಾಗಿ ಪ್ರಭಾಸ್ ಎಂಟ್ರಿ ಆಗುತ್ತದೆ.

ಆಗ ಕರ್ಣನ ಪಾತ್ರವನ್ನು ವೈಭವೀಕರಿಸಿ ತೋರಿಸಲಾಗಿದೆ. ಅದೇ ಸೀನ್‌ನಲ್ಲಿ ಅರ್ಜುನನ್ನು ಕರ್ಣನಿಗಿಂತಲೂ ಕಡಿಮೆ ಶೂರ, ಕರ್ಣನಿಗಿಂತಲೂ ಕಡಿಮೆ ಸಾಮರ್ಥ್ಯ ಇರುವ ವ್ಯಕ್ತಿ ಎಂದು ಪರೋಕ್ಷವಾಗಿ ಬಿಂಬಿಸಲಾಗಿದೆ.

# 16ರ ಹರೆಯದಲ್ಲಿ ಹಾರ್ಮೋನ್ ಇಂಜೆಕ್ಷನ್!



‘ಶಾಕಾ ಲಾಕಾ ಬೂಮ್ ಬೂಮ್’ ನಂತಹ ಟಿವಿ ಶೋಗಳಲ್ಲಿ ಬಾಲನಟಿಯಾಗಿ ಕಾಣಿಸಿಕೊಂಡ ಹನ್ಸಿಕಾ ಮೋಟ್ವಾನಿ ಈಗ ಹಿಂದಿ, ತಮಿಳು ಮತ್ತು ತೆಲುಗು ಚಿತ್ರಗಳಲ್ಲಿನ ತಮ್ಮ ಪಾತ್ರಗಳಿಗೆ ಹೆಸರುವಾಸಿಯಾಗಿದ್ದಾರೆ. ಹನ್ಸಿಕಾ ಕೇವಲ 15 ವರ್ಷದವಳಿದ್ದಾಗ ತೆಲುಗು ಚಿತ್ರ 'ದೇಶಮುದುರು' ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು.

ಈ ಚಿತ್ರದಿಂದ ಅವರ ಅಭಿಮಾನಿಗಳ ಸಂಖ್ಯೆ ಹೆಚ್ಚಾಯಿತು. ಈ ಸಮಯದಲ್ಲಿ ಕೆಲವರು ಹನ್ಸಿಕಾ ಅವರ ತಾಯಿಯ ಮೇಲೆ ಹನ್ಸಿಕಾಳನ್ನು ಬೇಗನೆ ದೊಡ್ಡವಳನ್ನಾಗಿ ಮಾಡಲು ಹಾರ್ಮೋನ್ ಇಂಜೆಕ್ಷನ್ ನೀಡಿದ್ದಾರೆ ಎಂದು ಆರೋಪಿಸಿದರು. ಹನ್ಸಿಕಾ ಮತ್ತು ಅವರ ತಾಯಿ ಸುದ್ದಿಗಳಿಗೆ ಪ್ರತಿಕ್ರಿಯಿಸಿದರು: ಈ ವದಂತಿಗಳಿಗೆ ತೆರೆ



ಎಳೆಯುತ್ತಾ ಹನ್ಸಿಕಾ, 'ಇದು ಸೆಲೆಬ್ರಿಟಿ ಆಗಿರುವುದರ ಒಂದು ಭಾಗ. ನಾನು 21 ವರ್ಷದವಳಿದ್ದಾಗ ಅವರು ಇಂತಹ ಅಸಂಬದ್ಧ ಸುದ್ದಿ ಬರೆದಿದ್ದರು. ನಾನು ಏನು ಹೇಳುತ್ತಿದ್ದೇನೆಂದು ನಿಮಗೆ ತಿಳಿದಿದೆ. ಆಗ ನಾನು ಅದನ್ನು ಸಹಿಸಿಕೊಳ್ಳಲು ಸಾಧ್ಯವಾದರೆ, ಈ ಬಾರಿಯೂ ಸಹಿಸಿಕೊಳ್ಳಬಲ್ಲೆ. ನನ್ನ ತಾಯಿ ನನ್ನನ್ನು ಮಹಿಳೆಯನ್ನಾಗಿ ಬೆಳೆಸಲು ಹಾರ್ಮೋನ್ ಇಂಜೆಕ್ಷನ್ ನೀಡಿದ್ದಾರೆ ಎಂದು ಜನರು ಹೇಳಿದರು. ನಾನು ಎಂಟು ವರ್ಷದವಳಿದ್ದಾಗಲೇ ನಟಿಯಾಗಿದ್ದೆ.' ಎಂದು ಹೇಳಿದರು. ಇದರ ಬಗ್ಗೆ ಮಾತನಾಡಿದ ಹನ್ಸಿಕಾ ಮೋಟ್ವಾನಿ ಅವರ ತಾಯಿ, 'ಇದು ನಿಜವಾಗಿದ್ದರೆ, ನಾನು ಟಾಟಾ, ಬಿರ್ಲಾಗಿಂತಲೂ ಶ್ರೀಮಂತಳಾಗುತ್ತಿದ್ದೆ. ಇದನ್ನು ಬರೆಯುವವರಿಗೆ ಮೆದುಳು ಇಲ್ಲವೇ ಎಂದು ನನಗೆ ಆಶ್ಚರ್ಯವಾಗುತ್ತದೆ. ನಾವು ಪಂಜಾಬಿಗಳು, ನಮ್ಮ ಹೆಣ್ಣುಮಕ್ಕಳು 12 ರಿಂದ 16 ವರ್ಷದೊಳಗೆ ದೊಡ್ಡವರಾಗುತ್ತಾರೆ.' ಎಂದು ಹೇಳಿದರು. ಮದುವೆಯ ಸಮಯದಲ್ಲಿ ಈ ಕಾರಣಕ್ಕಾಗಿ ಹನ್ಸಿಕಾ ಮೋಟ್ವಾನಿ ಸುದ್ದಿಯಲ್ಲಿದ್ದರು: ಹನ್ಸಿಕಾ ಮೋಟ್ವಾನಿ ಡಿಸೆಂಬರ್ 4, 2022 ರಂದು ಸೋಹೆಲ್ ಕಥುರಿಯಾ ಅವರನ್ನು ವಿವಾಹವಾದರು. ಆ ಸಮಯದಲ್ಲಿ ಹನ್ಸಿಕಾ ಸುದ್ದಿಯಲ್ಲಿದ್ದರು, ಏಕೆಂದರೆ ಅವರು ತಮ್ಮ ಸ್ನೇಹಿತೆ ರಿಂಕಿ ಅವರ ಪತಿಯನ್ನೇ ಮದುವೆಯಾಗಿದ್ದರು. ಕುತೂಹಲಕಾರಿ ಸಂಗತಿಯೆಂದರೆ, ಹನ್ಸಿಕಾ 2014 ರಲ್ಲಿ ಸೋಹೆಲ್ ಮತ್ತು ರಿಂಕಿ ಅವರ ಮದುವೆಯಲ್ಲಿ ಭಾಗವಹಿಸಿದ್ದರು.

ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. RNI.KAR/KAN/2009/31934, ದೂರವಾಣಿ: 9448074878
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
RNI.KAR/KAN/2009/31934.VOLUME-16/ISSUE-45 Email-mussanje2010@gmail.com, Phone: 9448074878